Reg. No. M. 1550

KODAGU

6–3–1936

IF NOT

delivered

please return to

"KODAGU"
OFFICE,
MERCARA.

ಕೊಡಗು

ಅಚ್ಚುಮೆಚ್ಚಿನ
ಮುದ್ರಣ ಕಲಸಕ್ಕೆ
"ಕೊಡಗು"
ಪ್ರೆಸ್ಸ್,
ಮಡಿಕೇರಿ.

ಹೆಚ್ಚಿನ ವಿಷಯಕ್ಕೆ
ಕೂಡಲೆ ವಿಚಾರಿಸಿರಿ.

ಪ್ರತಿ ಶುಕ್ರವಾರ ಪ್ರಕಟಿಸಲ್ಪಡುವದು.

ವಾರ್ಷಿಕ ಚಂದಾ ರೂ. ೩—೮—೦.

ಸಂಪಾದಕ—ಸಂಧ್ಯಂಡ ಐ. ಬೆಳ್ಯಪ್ಪ.

ಸಂಪುಟ ೧೫] ಮಡಿಕೇರಿ, ತಾ. ೬—೩—೧೯೩೬ [ಸಂಚಿಕೆ ೩೭

Telephon;
3145

By Appointment
To H. E The Governor of Madras.

Telegrams:
'PRECIOUS.'

Brooch

Necklace.

Ring.

Ring.

V. SUBRAMANIA IYER.

Jeweller, & Diamond Merchant,

52–15 2 & 3 Kuppumuthu Street Tiruvateswaranpet. POST BOX 423 TRIPLICANE. P. O., MADRAS.

Catalogue & special designs with quotations (free) on enqu ry

BANKING FACILITIES OF EVERY DESCRIPTION.

Head office:—UDIPI

BRANCHES:—
1. Madras,
2 Coondapoor.
3. Car Street, Mangalore
4. Bunder, Mangalore.
5 Shimoga
6. Udipi
7. Mercara.
8. Virarajendrapet

Security.

The financial strength and integrity of this Bank is shown by the growth of the RESERVES from a modest sum of Rs. 83000 in 1927 to its present position with Rs. 3,64,644.

BANKERS AT—
1. Bombay.
2. Calcutta
3. Karachi.
4. Bangalore.
5 Mysore.
6 Calicut.
7. Cannanore
8 Cochin, and other important places.

To those thinking of investments the following figures should strongly appeal.

Capital: Anthorised, issued and subscribed—Rs. 3,50,000.
Paid up Rs. 2,80,750.
Deposits—Rs. 27,99,323. Working Capital—Rs. 35,66,707.

Fixed Deposits now received upto 5%.

The Canara Banking Corporation Udipi Limited.

52—16 Estd. 1906.

ಜನರಲ್
ಅಷ್ಯೂರೆನ್ಸ್ ಸೊಸೈಟಿ, ಲಿಮಿಟೆಡ್.
(ಸ್ಥಾಪಿತವಾದದ್ದು 1907 ರಲ್ಲಿ)
ಜೀವವಿಮೆಯಲ್ಲಿನ ಅತ್ಯುತ್ತಮ ಸೌಲಭ್ಯಗಳನ್ನೆಲ್ಲ
ಕೊಡುತ್ತದೆ.
ಬೋನಸ್ಸು ಅತೀ ಹೆಚ್ಚು.

ಜೀವಾವಧಿ ಪಾಲಿಸಿಗಳ ಮೇಲೆ ವರ್ಷಕ್ಕೆ ರೂ. 25%೦
ಎಂಡೋಮೆಂಟ್ ಪಾಲಿಸಿಗಳ ಮೇಲೆ ವರ್ಷಕ್ಕೆ ,, 20%೦
ಪಾಲಿಸಿಯ ಶರತ್ತುಗಳು ಅತೀ ಸುಲಭ
ಎಷ್ಯೂರೆನ್ಸ್ ಯೋಜನೆಗಳು ಎಲ್ಲರಿಗೂ ಹಿತಕರವಾಗಿದೆ.
ಏಜೆನ್ಸಿ ನಿಯಮಗಳು ಅತೀ ಲಾಭದಾಯಕವಿದ್ದು
ವಂಶವಾರಂಪರ್ಯ ಕಮಿಶನ್ ದೊರೆಯುವಂತಿದೆ.
ಹೆಚ್ಚಿನ ವಿವರಗಳಿಗೆ ಕೂಡಲೇ ಬರೆಯಿರಿ.

ಪಿ. ಡಿ. ಭಾಗವಹನ, ಎಫ್. ಎಸ್. ಎಸ್. (ಲಂಡನ್),
ಜನರಲ್ ಮೇನೇಜರ್, ದಿ ಜನರಲ್ ಅಷ್ಯೂರೆನ್ಸ್
ಸೊಸೈಟಿ ಲಿಮಿಟೆಡ್, ಅಜ್ಮೀರ್. ಅಥವಾ:—
ಎ ಎಸ್ ಎಸ್ ಅಯ್ಯಂಗಾರ್,
ಸುಪರಿಂಟೆಂಡೆಂಟ್, ಜನರಲ್ ಅಷ್ಯೂರೆನ್ಸ್, ಬಿಲ್ಡಿಂಗ್
ಚಾಮರಾಜಪೇಟೆ, 3ನೇ ರೋಡು
52—39 ಬೆಂಗಳೂರು

ಕೊಡಗು ಕೌನ್ಸಿಲು ವಿಂಟಿಂಗು.

ಎರಡನೇ ದಿನ.

ತಾ 25—2—35ನೇ ಮಂಗಳವಾರ ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಕೌನ್ಸಿಲು ವಿಂಟಿಂಗು ಹಗಲು 11 ಗಂಟೆಗೆ ಪ್ರಾರಂಭವಾಯಿತು. ಮೆ. ಗಳಾದ ಪುಚ್ಚಿನೊಡ ನಾಣಯ್ಯನವರು ಮತ್ತು ತಿರುವೆಂಗಡಂ ಪಿಳ್ಳೈಯವರು ನೈಹರ್ಜರಾಗಿದ್ದರು.

ಬಡ್ಜೆಟ್ಟನ್ನು ಕುರಿತು ಭಾಷಣಗಳು ಪ್ರಾರಂಭವಾದವು.

ಮೆ ಜೆಪ್ಪುಡಿರ ಪೂವಯ್ಯನವರು ಬರೆದು ತಂದಿದ್ದ ಭಾಷಣವನ್ನು ಮೆ. ಬಲ್ಲಚಂಡ ಬೆಳ್ಯಪ್ಪನವರಿಂದ ಓದಿಸಿದರು. ಅದರ ಸಾರಾಂಶವೇನೆಂದರೆ—ದೇಶದ ದರಿದ್ರಾವಸ್ಥೆಯು ಎಲ್ಲರಿಗೂ ತಿಳಿದಿರುವುದಾಗಿದೆ. ಮಳೆಯು ಸಕಾಲದಲ್ಲಿ ತಕ್ಕಷ್ಟು ಬೀಳದಿರುವುದರಿಂದಲೂ ಬೆಳೆದದ್ದಕ್ಕೆ ನ್ಯಾಯವಾದ ಬೆಲೆ ಇಲ್ಲದಿರುವುದರಿಂದಲೂ ಈ ದರಿದ್ರಾವಸ್ಥೆ ಬಂದಿರುವುದಾಗಿದೆ. ಇ ಕನಾಮಿಕ್ ಇನ್‌ಕ್ವಯರಿ ಕಮಿಟಿಯವರು ನಡೆಸಿದ ಶೋಧೆಗೂ ಮತ್ತು ಸೂಚಿಸಿರುವ ಸಲಹೆಗಳಿಗೂ ಅವರನ್ನು ಅಭಿನಂದಿಸಬೇಕಾಗಿದೆ. ಅವರ ಸೂಚನೆಯಂತೆ ಸಾಲ ತೀರ್ಮಾನ ಬೋರ್ಡನ್ನು ಸ್ಥಾಪಿಸಿ ರೈತರ ಸಾಲದ ಹೊರೆಯನ್ನು ನಿವಾರಿಸಬೇಕು. ಸಾಲ ತೀರ್ಮಾನದ ಬೋರ್ಡು ಮತ್ತು ಭೂಮಿ ಗಿರ್ವಿ ಬ್ಯಾಂಕು ಏಕ ಕಾಲದಲ್ಲಿ ಸ್ಥಾಪಿಸಲ್ಪಡಬೇಕು. ರೈತರು ಮತ್ತು ಪ್ಲಾಂಟರುಗಳಿಗೆ ದ್ರವ್ಯ ಸಹಾಯ ಮಾಡದಿದ್ದರೆ ಯಾವ ಬಗೆಯ ಪರಿಹಾರವೂ ಇಲ್ಲದಾಗುವುದು. ಭೂಮಿ ಗಿರ್ವಿ ಬ್ಯಾಂಕನ್ನು ಸೊಟ್ಸಲ್ ಬ್ಯಾಂಕಿನ ಅಂಗವನ್ನಾಗಿ ಸ್ಥಾಪಿಸಬೇಕೆಂದೆನ್ನುವ ಅಭಿಪ್ರಾಯವು ಪ್ರಯೋಗಿಕವಾದದ್ದಲ್ಲ. ಸೊಟ್ಸಲ್ ಬ್ಯಾಂಕಿನ ನಿಬಂಧನೆಗಳು ಮತ್ತು ರಚನೆಯೂ ಭೂಮಿ ಗಿರ್ವಿ ಬ್ಯಾಂಕಿನ ನಿಬಂಧನೆ ಮತ್ತು ರಚನೆಯು ಬೇರೆ ಬೇರೆಯಾದವುಗಳು. ಕೋ-ಆಪರೇಟಿವ್ ಇಲಾಖೆಯನ್ನು ವ್ಯವಸ್ಥಿತ ಮಾಡಬೇಕು. ಅ. ರಿಜಿಸ್ಟ್ರಾರನ್ನು ನೇಮಿಸುವುದು ಬಹಳ ಒಳ್ಳೆಯದು. ಪೊನ್ನಂಪೇಟೆಯೂ ಹುದಿಕೇಂಯಲ್ಲಾಗಲೀ ಹೈಸ್ಕೂಲುಗಳನ್ನು ಸ್ಥಾಪಿಸಬೇಕು. ದೇಶದವರ ಆರೋಗ್ಯವು ಒಹಳ ಮಟ್ಟಿಗೆ ಕೆಟ್ಟಿದೆ. ಈ ವಿಷಯದಲ್ಲಿ ಸರ್ಕಾರವು ಹೆಚ್ಚು ಶ್ರದ್ಧೆ ವಹಿಸಬೇಕು. ಸುಧಾರಣೆಗಳ ವಿಷಯದಲ್ಲಿ ನಮ್ಮನ್ನು ಒಹಳ ಹಿಂದೂಡಿರುವರು. ಇದು ನ್ಯಾಯವಲ್ಲ. ದೊಡ್ಡ ಪ್ರಾಂತ್ಯಗಳಿಗೆ ಕೊಡಲ್ಪಡುವ ಸುಧಾರಣೆಗಳು ನಮಗೂ ಸಿಗಬೇಕು.'

ಮೆ. ಎ. ಇ. ಜೆ ನಿಕಲ್ಸರವರ —'ಫೈನಾನ್ಸ್ ಮೆಂಬರರು ಕೊಟ್ಟ ಸಾಂಗವಾದ ಒಡ್ಜೆಟ್ ವಿವರಣೆಯು ಮದೇಶದ ನಿಜ ಸ್ಥಿತಿಯನ್ನು ವ್ಯಕ್ತಗೊಳಿಸುತ್ತದೆ. ಪ್ರಪಂಚವನ್ನೇ ಆವರಿಸಿರುವ ಆರ್ಥಿಕ ದುಸ್ಥಿತಿಯೇ ಇದಕ್ಕೆ ಕಾರಣ. ಪ್ಲಾಂಟರುಗಳ ಸ್ಥಿತಿಯು ರೈತರ ಸ್ಥಿತಿಗಿಂತ ಶೋಚನೀಯವಾಗಿರುವ ಸ್ಥಿತಿಯಲ್ಲಿದೆ. ನಮ್ಮ ಪ್ರಾಂತವನ್ನು ಇಂಡಿಯಾ ಸರ್ಕಾರವು ನಿರ್ಲಕ್ಷಿಸಿರುವಂತೆ ತೋರುತ್ತೆ. ನಮಗೆ ವಾರ್ಷಿಕ ವಂತಿಗೆಯನ್ನು ಕೊಟ್ಟು ಅವಶ್ಯ ಸಹಾಯ ಮಾಡಬೇಕು. ಕೊಡಗಿನವರು ಬಹಳ ಉತ್ತಮ ದರ್ಜೆಯ ಪ್ರಜೆಗಳು. ರಾಜಭಕ್ತರು. ಆದ್ದರಿಂದ ಕೊಡಗಿಗೆ ಅವಶ್ಯ ಧನ ಸಾಹಾಯವು ಇಂಡಿಯಾ ಸರ್ಕಾರದಿಂದ ದೊರೆಯಬೇಕು. ಕಳೆದ ಸಾರಿ ಪ್ಲೇಗು ನಿವಾರಣೆಯ ತರಾವು ಪಾಸಾಯಿತು. ಸರ್ಕಾರವು ಆದರಂತೆ ಇತರ ಚಿಕ್ಕ ಪೆಟ್ಟಣಗಳಲ್ಲಿ ವರದಿ ಪ್ರಕಾರ ಮಿಡಿಕೇರಿಯಲ್ಲಿ ಪ್ಲೇಗು ನಿವಾರಿಸುವ ಪ್ರಯತ್ನ ಮಾಡಿರುವುದಿಲ್ಲ. ಕೊಡಗಿಗೆ ಸುಧಾರಣೆಗಳನ್ನು ಪಡೆಯುವುದು ಮತ್ತು ಧನ ಸಾಹಾಯವನ್ನು ಹೊಂದುವ ಪ್ರಯತ್ನಗಳು ಸ್ಥಳೀಯ ಸರ್ಕಾರದಿಂದ ತಕ್ಷಣ ಆಗಬೇಕು.

ಮೆ. ತಿಮ್ಮಪ್ಪಪುಂಜರವರು—ಫೈನಾನ್ಸ್ ಮೆಂಬರರ ವಿವರಣೆಯು ನಮ್ಮ ಪ್ರಾಂತ್ಯದ ದರಿದ್ರಾವಸ್ಥೆಯು ಅಸ್ಮಗೂಡಿನವರೆಗೆ ವ್ಯಕ್ತಗೊಳಿಸಿದೆ. ಹಣವಿಲ್ಲದ ಈ ವಿಷಯದಲ್ಲಿ ಯೋಜನೆಗಳಿಂದ ಪ್ರಯೋಜನವಿಲ್ಲ. ಪ್ರತಿಯೊಂದು ಅಧಿವೇಶನದಲ್ಲಿ ವಾರ್ಷಿಕ ವಂತಿಗೆಯ ಕೂಗು. ಆದರೆ ಏನೂ ಬರುವಂತೆ ಕಾಣುವುದಿಲ್ಲ. ಕೊಡಗಿನ ಸರ್ಕಾರವೂ ಪ್ರಜೆಗಳೂ ಸಾಲದಲ್ಲಿ ಮುಳುಗಿರುವರು. ಈ ಸಮಯದಲ್ಲಿ ಇಂಡಿಯಾ ಸರ್ಕಾರವು ಸಾಹಾಯ ಕೊಡಬೇಕು. ಹಿಂದುಳಿದ ಪಂಗಡದವರಿಗೆ ತಕ್ಕ ಪ್ರಮಾಣದಲ್ಲಿ ವಿದ್ಯಾ ವೇತನ ಕೊಡಲ್ಪಟ್ಟಿರುವುದಿಲ್ಲ. ಕಳೆದ ಕೌನ್ಸಿಲು ಸಭೆಯಲ್ಲಿ ಸರ್ಕಾರಿ ವೆಂಬರು ಭರವಸೆಯನ್ನಿತ್ತರೂ ಈಗ ನಿರ್ಲಕ್ಷಿಸಿರುವಂತೆ ತೋರುತ್ತೆ. ಸರ್ಕಾರವೂ ಮತ್ತು ಜನರೂ ಸೇರಿ ಈ ಪ್ರಕಾರ ತಮ್ಮ ತಮ್ಮ ಕಷ್ಟಗಳನ್ನು ಎತ್ತಿ ಕೂಗುವುದರಿಂದ ಪ್ರಯೋಜನವಿಲ್ಲ. ಒಡನೆ ತಕ್ಕ ರೀತಿಯಿಂದ ಮುಂದಿನ ಕಾರ್ಯವನ್ನು ಕೈಕೊಳ್ಳಬೇಕು ಸುದಿನಗಳು ಬಾರದಿರಲಿಕ್ಕಿಲ್ಲ.'

ಮೆ. ವೀರಭದ್ರಯ್ಯನವರು—(ಇವರು ಕನ್ನಡದಲ್ಲಿ ಮಾಡಿದ ಭಾಷಣವನ್ನು ಮೆ. ಐ ಸಿ. ಸುಬ್ಬಯ್ಯನವರು ತರ್ಜುಮೆಮಾಡಿ ಹೇಳಿದರು.) ಈ ಬೊದಲೇ ಭಾಷಣ ಮಾಡಿದವರು ಎಲ್ಲಾ ಮಹತ್ವದ ವಿಷಯಗಳನ್ನೆಲ್ಲ ಎತ್ತಿ ಚೆನ್ನಾಗಿ ವಿವರಿಸಿರುವರು. ಅವುಗಳನ್ನೆಲ್ಲಾ ಪುನಹ ಎತ್ತಿ ಕಾಲ ವಿಳಂಬ ಮಾಡಲು ಇಷ್ಟಪಡುವುದಿಲ್ಲ. ಕಮಿಷನರುಗಳನ್ನು ಆಗಾಗ್ಗೆ ಬದಲಾಯಿಸುವುದರಿಂದ ಸರ್ಕಾರಕ್ಕೆ ಹೆಚ್ಚು ಖರ್ಚಾಗುವುದಲ್ಲದೆ ರೈತರಿಗೂ ಅನೇಕ ತೊಂದರೆಗಳಾಗುತ್ತದೆ. ಈ ಮುಂದಿನ ವರ್ಷ [illegible] ದಲ್ಲಿ ನಾಗರೀಕತೆಯು ಹೆಚ್ಚಾಗುವಂತೆಯೇ ಜನರು ನಾಗರೀಕ ಆಡಳಿತೆಯನ್ನೇ ಅಪೇಕ್ಷಿಸುತ್ತಾರೆ. ಆಗ್ಗೆ ಅದಕ್ಕೆ ಸರಿಯಾದ ಅಭಿವೃದ್ಧಿಯ ಕಾರ್ಯಗಳನ್ನು ಮಾಡುತ್ತ ಹೋಗದಿದ್ದರೆ ದೇಶದಲ್ಲಿ ಅತೃಪ್ತಿಯು ಹೆಚ್ಚುತ್ತದೆ ಇದಕ್ಕಾಗಿ ಸರ್ಕಾರದವರ ಅಭಿವೃದ್ಧಿಯ ಕಾರ್ಯಗಳಿಗಾಗಿ ಹೆಚ್ಚಿನ ದ್ರವ್ಯ ಸಾಹಾಯ ಪಡೆಯಬೇಕು. ಸರ್ಕಾರವು ಇಂಡಿಯಾ ಸರ್ಕಾರದಿಂದ ಸಾಲ ಮಾಡುವಂತೆ ರೈತನು ಹಣವಿರುವವರಿಂದ ಸಾಲ ಮಾಡಬೇಕಾಗಿದೆ. ಪ್ಲಾಂಟರುಗಳು ಸಹ ಹೀಗೆಯೇ. ವ್ಯವಸಾಯ ಇಲಾಖೆ ಮತ್ತು ಪಶುವೈದ್ಯ ಇಲಾಖೆಯವರು ನಮ್ಮ ದೇಶದ ಅಭಿವೃದ್ಧಿಗೆ ಮೂಲ ಕರ್ತೃಗಳು. ದೇಶವಲ್ಲಿ ಅನೇಕ ಸಾರ್ವಜನಿಕ ಕೆಲಸಗಾರರು ಏನೆಂದೂ ಸಂಬಳವಿಲ್ಲದೆ ಅವರ ಅಭಿಪ್ರಾಯಗಳನ್ನು ಭಾಷಣಗಳ ಮೂಲಕ ಪ್ರಚರಿಸುತ್ತಿರುವಾಗ ಸಂಬಳವನ್ನು ಪಡೆಯುವ ಈ ಇಲಾಖೆಯ ಉದ್ಯೋಗಸ್ಥರುಗಳು ಯಾತಕ್ಕೆ ರೈತನಿಗೆ ಉಪಯೋಗಕರವಾದ ವಿಷಯಗಳನ್ನು ಕುರಿತು ಭಾಷಣ ಯಾ ಪತ್ರಿಕೆಗಳ ಮೂಲಕ ಪ್ರಚಾರ ನಡಿಸಬಾರದು. ಕಂದಾಯವನ್ನು ಕೊಟ್ಟದಕ್ಕೆ ತಕ್ಕ ಪ್ರತಿಫಲ ರೈತನಿಗೆ ಸಿಗುವುದಿಲ್ಲ. ಮಂತ್ರಾಧಿಕಾರಿಗಳು ಬಹಳ ಕಷ್ಟದಲ್ಲಿರುವರು. ಜಮಾಬಂದಿಯನ್ನು ಮಂತ್ರಗಳ ಹೆಸರಿಗೆ ಬದಲಾಯಿಸಿದ್ದು ಬಹಳ ಅನ್ಯಾಯ. ಡಿ. ಬೋರ್ಡಿಗೆ ಹೆಚ್ಚಿನ ಧನ ಸಾಹಾಯ ಕೊಡಬೇಕು.''

ಮೆ. ಹುಡ್ಡಿ ಚೆನ್ನಮಲ್ಲಪ್ಪನವರು—(ಇವರ ಕನ್ನಡ ಭಾಷಣವನ್ನು ಮೆ ಐ ಸಿ ಸುಬ್ಬಯ್ಯನವರು ಇಂಗ್ಲಿಷಿನಲ್ಲಿ ಭಾಷಾಂತರಿಸಿದರು) 'ನಮ್ಮ ತಾಲೋಕು ವಿಸ್ತೀರ್ಣದಲ್ಲಿ ದೊಡ್ಡದು. ಉತ್ಪತ್ತಿ ಜಾಸ್ತಿ. ಗಂಧ ಅಲ್ಲೇ ಹೆಚ್ಚು. ಆದರೆ ನಮ್ಮ ತಾಲೋಕಿನಲ್ಲಿ ಒಂದು ಬೋರ್ಡಿಂಗು ಇಲ್ಲ. ಆಟಕ್ಕೆ ಒಳ್ಳೇ ಜಾಗವಿಲ್ಲ ಕುಡಿಯಲು ಒಳ್ಳೇ ನೀರಿಲ್ಲ. ನಮ್ಮ ತಾಲೋಕಿನವರಿಗೆ ಸರ್ಕಾರಿ ನೌಕರಿ ಸಿಗುವುದೇ ಇಲ್ಲ. ನಮ್ಮ ನಾಡಿನಿಂದ ಹೆಚ್ಚು ಕಂದಾಯವು ಸಲ್ಲುತ್ತಿರುವುದಾದರೂ ಹಾದಳ್ಳಿದ ನಮ್ಮ ತಾಲೋಕಿನವರನ್ನು ಮುಂದಕ್ಕೆ ತರುವುದು ಸರ್ಕಾರದವರ ಕರ್ತವ್ಯ.

ಫೈನಾನ್ಸ್ ಮೆಂಬರರ ಉತ್ತರ—ಒಡ್ಜೆಟ್ಟನ್ನು ಕುರಿತು ಅನೇಕ ವಿಷಯಗಳನ್ನು ಚರ್ಚಿಸಿದ್ದಾಯಿತ. ಕೊಡಗು ಒಂದು ಚೀಫ್ ಕಮಿಷನರ ಪ್ರಾಂತ್ಯವಾದ್ದರಿಂದ ಹಣದ ವ್ಯವಸ್ಥೆಯೂಗದೆ ಸುಧಾರಿತ ರಾಜ್ಯಾಡಳಿತವು ಸಾಧ್ಯವಾಗದಲ್ಲ. ಪ್ರಾಂತ್ಯಗಳ ಸಂಬಂಧ ಸರ್ ಒಟ್ಟೊಸಿಮಿಯರ್‌ರವರ ಶೋಧೆಸೆಗೆ ಕೊಡಗಿನ ವಿಚಾರವು ಬರುವುದಿಲ್ಲ. ರಿಟ್ರೆಂಚ್‌ಮೆಂಟನ್ನು ಸಾಧ್ಯವಾದ ವಟ್ಟಿಗೆ ಮಾಡಬೇಕು. ಆದರೆ ಕಾರ್ಯ ಸಾಧಕವು ಕಂಟಿತವಾಗಬೋವ್ಪಾದಿಯಲ್ಲಿ ರಿಟ್ರೆಂಚ್‌ಮೆಂಟು ಆಗಬೇಕಾಗಿದೆ ಈ ಸರ್ಕಾರವು ಹೆಚ್ಚಿನ ಹಣ ಸಾಹಾಯಕ್ಕೆ ಇಂಡಿಯಾ ಸರ್ಕಾರವನ್ನು ಬಹಳ ಒತ್ತಾಯ ಮಾಡಿದೆ. ಟೌನಲ್ ಕಮಿಟಿ ವಿಚಾರವಾಗಿ. ಸರ್ಕಾರವು ಸ್ಥಳೀಯ ಸಂಸ್ಥೆಗಳ ವಿಷಯದಲ್ಲಿ ಸುಮ್ಮನೆ ಕೈ ಹಾಕುವುದಿಲ್ಲ. ಅವರ ಕಾರ್ಯ ನಡೆಸಲು ಒಂದು ಜುನಾಯಿತ ಕಮಿಟಿ ಇದೆ. ವ್ಯವಸಾಯ ಇಲಾಖೆಯ ಅಭಿವೃದ್ಧಿಗೆ ಹಣ ಇಲ್ಲದಿರುವುದೇ ಕಾರಣ. ಸರ್ಕಾರವು ಈ ಅವಶ್ಯಕತೆಯನ್ನು ಮನಗಂಡಿದೆ. ವೆಟರಿನರಿ ಇಲಾಖೆಯ ವಿಚಾರವೂ ಹೀಗೆಯೇ. ವೀರಾಜಪೇಟೆಯಲ್ಲಿ ಒಂದು ಹುಗಾಮಿ ವೆ. ಆಸ್ಪತ್ರೆ ಇಡಲಾಗುವುದು. ಇಕನಾಮಿಕ್ ಕಮಿಟಿಯಲ್ಲಿ ನಾನೂ ಒಬ್ಬನಾಗಿದ್ದೆನು ಅದರ ಸಿಫಾರಸ್ಸುಗಳಿಗೆ ನಾನೂ ಒಪ್ಪಿಗೆಯನ್ನಿತ್ತಿರುವೆನು. ಆ ನನ್ನ ಅಭಿಪ್ರಾಯಗಳು ಇನ್ನೂ ಬದಲಾಗಿರುವುದಿಲ್ಲ ಅನಾವಶ್ಯ ಕಾಲವಿಳಂಬ ಮಾಡದೆ ಆ ಸಿಫಾರಸ್ಸುಗಳನ್ನು ಜಾರಿಗೆ ತರಲಾಗುವುದು. ಮಾರ್ಕೆಟಿಂಗ್ ವಿಚಾರದಲ್ಲಿ ಒಳ್ಳೇ ಎಸ್ಸೆಟರ್ಸ್‌ಗಳನ್ನು ಆಗಿಂದಾಗ್ಗೆ ಕರೆಸಿ ಅಭಿಪ್ರಾಯ ಪಡೆಯಲಾಗುವುದು. ಪಬ್ಲಿಕ್ ಹೆಲ್ತ್ ಯೋಜನೆಯು ಇನ್ನೂ ಆಲೋಚನೆಯಲ್ಲಿದೆ ಮತ್ತರ ಜಹಗೀರು ಭೂಮಿಗಳ ಜಮಾಬಂದಿ ಬದಲಾವಣೆಯ ವಿಷಯ ನಾನು ವಿಚಾರ ಮಾಡಲಿರುವೆನು ಪ್ಲಾಂಟರುಗಳ ಸಹಾಯಕ್ಕಾಗಿ 7 ಲಕ್ಷ ರೂ. ಸಾಲಕ್ಕೆ ಬರೆದಿರುವುದಲ್ಲದೆ ಅದನ್ನು ಬೇಗನೆ ಮಂಜೂರು ಮಾಡಲು ಒತ್ತಾಯ ಮಾಡುತ್ತಿರುವೆವು. ವಿದ್ಯಾ ಪ್ರಚಾರಕ್ಕಾಗಿ ಮಾಡುತ್ತಿರುವ ಖರ್ಚನ್ನು ಹೆಚ್ಚಿಸುವ ಅಭಿಪ್ರಾಯದಲ್ಲಿದ್ದೇನೆ ಬಡ್ಜೆಟ್ಟಿನ ವಿಷಯದ ಎಲ್ಲ ಚರ್ಚೆಗಳನ್ನು ಪರಿಶೀಲಿಸಲಾಗುವುದು.

ಬಡ್ಜೆಟ್ಟಿನ ಮೇಲೆ ತರಾವುಗಳು

(1) ತರಿ ಮತ್ತು ಕುಷ್ಕಿ ಜಮೀನುಗಳ ಕಂದಾಯದಲ್ಲಿ $33\frac{1}{3}$ ರಷ್ಟು ಮೊಫಿ ಬಿಡಬೇಕೆಂಬುವ ತರಾವಿನ ಸೂಚಕರಾದ ಮೆ. ಜೆಪ್ಪುಡೀರ ಪೂವಯ್ಯನವರು ಅವರ ತರಾವನ್ನು ಹಿಂತೆಗೆದುಕೊಂಡರು.

(2) ತರಿ ಮತ್ತು ಕುಷ್ಕಿ ಜಮೀನುಗಳ ಕಂದಾಯದಲ್ಲಿ ಶೇಕಡ 25ರಷ್ಟು ಮೊಫಿ ಬಿಡಬೇಕೆಂದೆನ್ನುವ ತರಾವನ್ನು ಮೆ. ಬಲ್ಲಚಾಡ ಬೆಳ್ಯಪ್ಪನವರು ಸೂಚಿಸಿ ರೈತರ ಈಗಿನ ದುಸ್ಥಿತಿಯನ್ನೂ, ಬೆಳೆ ಫಸಲು ಮತ್ತು ಬೆಲೆಗಳಲ್ಲಿನ ವ್ಯತ್ಯಾಸಗಳನ್ನೂ ವಿವರಿಸಿ ತಮ್ಮ ತರಾವಿಗೆ ಸಭೆಯು ಮಂಜೂರಾತಿಯನ್ನು ಅಪೇಕ್ಷಿಸಿದರು.

ಡಿಸ್ಟ್ರಿಕ್ಟ್ ಮೇಜಸ್ಟ್ರೇಟರು—'ಸರ್ಕಾರವು ಈ ವಿಚಾರದಲ್ಲಿ ಹೆಚ್ಚು ಸಹಾನುಭೂತಿ ತೋರುವುದಿದೆ ಫಸಲುಗಳು ಮುಖ್ಯವಾಗಿ ಭತ್ತದ ಫಸಲು ಬಹಳವಾಗಿ ಕೆಡಿಸಿವುದಾಗಿ ವರದಿ ಬಂದಿದೆ. ಜಮಾಬಂದಿ ಸಮಯಗಳಲ್ಲಿ ಸಾವಿರಗಟ್ಟಿ ಅರ್ಜಿಗಳು ಈ ಸಂಬಂಧವಾಗಿ ಬಂದವು. ಚೀಫ್ ಕಮಿಷನರವರು ಈ ಸಂಬಂಧ ಖಂಡಿತವಾಗಿಯೂ ಸಹಾಯ ತೋರಬೇಕೆಂದಿರುವರು. ಆದರೆ ಎಷ್ಟು ಕಂದಾಯ ಮೊಫಿ ಬಿಡಲಾಗುವದೆಂಬುದು ಇವತ್ತು ನಿಶ್ಚಯವಾಗಿ ಹೇಳಲಿಕ್ಕಾಗುವದಿಲ್ಲ. ಅವನ್ನು ಈ ಸಭೆಯು ಚರ್ಚೆ ಕಳೆದ ನಂತರ ಚೀಫ್ ಕಮಿಷನರವರು ಹೆನ್ನಾಗಿ ಪರ್ಯಾಲೋಚಿಸಿ ನಿಶ್ಚರ್ಷಿಸುವರು. ಇಲ್ಲವೆ ಕಳೆದ ಮತ್ತು ಆಜೆ ವರ್ಷಗಳಲ್ಲಿ ವಸೂಲು ಮಾಡದೆ ಬಾಕಿ ಮೊಡಿದ್ದ ಕಂದಾಯದ ವಸೂಲಿಯ ಅವಧಿಯನ್ನು ಇನ್ನು ಒಂದು ವರ್ಷದ ಮಟ್ಟಿಗೆ ಮುಂದಾಸಿಸುವರು. ತರಾವಿ ಸಾಲಗಳಿಗೆ ಹೆಚ್ಚಿನ ಕಂತುಗಳು ಕೊಡಲಾಗುವುದು.'

ಈ ತರಾವಿಗೆ ಒತ್ತಾಸೆಯಾಗಿ ಮೆ ಗಳಾದ ಐಚೆಟ್ಟಿರ ಸುಬ್ಬಯ್ಯನವರು, ಲೆ ಕ. ಹೆಚ್ ಹೆಫ್. ವಲೆಂಡರವರು, ಕೊಂಗಂಡ ಗಣಪತಿಯವರು, ಸಿ. ಕಾಳಪ್ಪನವರು, ಹುಡ್ಡಿ ಚನ್ನಮಲ್ಲಪ್ಪನವರು, ನಡಿಕೇರಿಯಂಡ ಸೋಮಯ್ಯನವರು ಮತ್ತು ಸೆಷಜಕರು ಮಾತಾಡಿದ ನಂತರ ಡಿ. ಮೋಜಿಸ್ ರೇಟರು ಮೊದಲಿನಂತೆ ಪುನಃ ಭುವನೆಯನ್ನು ಕೊಟ್ಟು 'ಓಟಿಗೆ ಹಾಕಿದಲ್ಲಿ 'ಸರ್ಕಾರಿ ವೆಂಬರುಗಳು ಓಟು ಕೊಡುವುದಿಲ್ಲ' ಎಂದು ಉಕ್ತರವಿತ್ತನಂತರ ತರಾವು ಓಟಿಗೆ ಹಾಕಲ್ಪಟ್ಟು ನಾಲ್ಕು ಸರ್ಕಾರಿ ಮೆಂಬರುಗಳಲ್ಲದೆ ಎಲ್ಲರೂ ತರಾವಿನ ಪರವಾಗಿ ಓಟು ಕೊಟ್ಟದ್ದರಿಂದ ತರಾವು ಪಾಸಾಯಿತು.

ಸಭೆಯು ಅಪರಾಹ್ನ 2—15ಕ್ಕೆ ಮುಂದಾಸಿಡಲಾಯಿತು.

ಅಪರಾಹ್ನ 2—35 ಗಂಟೆ

ಈ ವೊದಲು ಪಾಸಾದ ತರಾವಿನ ಉದ್ದೇಶವು ಬಾಕಿ 4 ತರಾವುಗಳು ಹಿಂತೆಗೆಯಲ್ಪಟ್ಟವು.

(7) 'ದಕ್ಷಿಣ ಭಾಗದ ಡಿವಿಜನಲ್ ಫಾರೆಸ್ಟ್ ಆಫೀಸರ ಹುದ್ದೆಯನ್ನು ತೆಗೆದುಹಾಕಿ ಕೊಡಗಿಗೆ ಒಬ್ಬ ಹಿಂದೀ ಫಾರೆಸ್ಟ್ ಆಫೀಸರನ್ನು (ಐ ಎಫ್. ಎಸ್.) ನೇಮಿಸಬೇಕು' ಎನ್ನುವ ತರಾವನ್ನು ಮೆ. ಬಲ್ಲಚಾಂಡ ಬೆಳ್ಯಪ್ಪನವರು ಸೂಚಿಸಿ ಖರ್ಚು ಕೋತಿ ಮಾಡುವ ವಿಷಯವನ್ನು ವಿವರಿಸಿ ಭಾಷಣ ಮಾಡಿದರು.

ಚೀಫ್ ಫಾರೆಸ್ಟ್ ಆಫೀಸರು—'ದಕ್ಷಿಣ ಭಾಗದ ಆಫೀಸರನ ತೆಗೆದು ಕೆಲಸವು ಬಹಳವಾಗಿ ಸಾಗುವಾಗಿ ನಡೆಯುವುದಿಲ್ಲ. ಇದರಿಂದ ಕಾರ್ಯಸಾಧನೆಗೆ ಬಾಧಕವಾಗುತ್ತದೆ. ಇಂಡಿಯನ್ ಐ ಯ್ಫ್. ಯ್ ಸ್ ಗಳು ಯುರೋಪಿಯನರಷ್ಟೇ ಯೂ ಹೆಚ್ಚೇ ಸಂಬಳ ಹೊಂದುವರಾದ್ದರಿಂದ ಇನ್ನರಷ್ಟೇ ಬೇಕೆನ್ನುವದರಿಂದ ಖರ್ಚು ಕೋತಿಯಾಗಲಾರದು.' ಎಂದು ತರಾವನ್ನು ವಿರೋಧಿಸಿದರು.

ಮೆ ಐಚೆಟ್ಟಿರ ಸುಬ್ಬಯ್ಯನವರು—ತರಾವಿನ ಪರವಾಗಿಯೂ, ಮೆ ಎ ಇ. ಜೆ. ನಿಕ್ಕಲ್ಸರವರು ಮತ್ತು ಕಮಿಷನರವರು ವಿರೋಧವಾಗಿಯೂ ಭಾಷಣವಿತ್ತ ಮೇಲೆ ಸಭಾಪತಿಗಳು ಮತ್ತು ಚೀಫ್ ಫಾರೆಸ್ಟ್ ಆಫೀಸರರಿತ್ತ ಉತ್ತರಗಳನಿತ್ತ ತರಾವು ಓಟಿಗೆ ಹಾಕಲ್ಪಟ್ಟಿತು. ತರಾವಿಗೆ ಪರವಾಗಿ 8 ಓಟುಗಳೂ ವಿರೋಧವಾಗಿ 6 ಓಟುಗಳೂ ದೊರೆತದ್ದರಿಂದ ತರಾವು ಪಾಸಾಯಿತು.

(8) ಸರ್ ಒಟ್ಟೊಸಿಮಿಯರ್‌ರವರು ನಡೆಸಲಿರುವ ಆರ್ಥಿಕ ವಿಚಾರಣೆಯಲ್ಲಿ ಕೊಡಗಿನ ಸರ್ಕಾರವು ಕೊಡಗಿನ ಹಣವಾಲನ್ನು ಮುಂದಿಟ್ಟು ಮುಂದಕ್ಕೆ ಕೊಡಗು ಒಂದು ಪ್ರತ್ಯೇಕ ಪ್ರಾಂತ್ಯವಾಗಿರಲು ಸಾಧ್ಯವಾಗುವಂತೆ ಅವಶ್ಯಕವಾದಷ್ಟು ವಾರ್ಷಿಕ ವಂತಿಗೆಯನ್ನು ಪಡೆಯಬೇಕು' ಎಂಬ ತರಾವನ್ನು ಮೆ. ಐಚೆಟ್ಟಿರ ಸುಬ್ಬಯ್ಯನವರು ತಂದು ಅದನ್ನು ಸಮರ್ಥಿಸಿ ಭಾಷಣವಿತ್ತರು.

ಫೈನಾನ್ಸ್ ಮೆಂಬರರು—'ಈ ವಿಷಯದ ಚರ್ಚೆಗಳನೇಕ ಸಾರೆ ಈ ಸಭೆಯಲ್ಲಿ ನಡೆದಿದೆ. ಮೂನ್ಯ ಸದಸ್ಯರು ತಿಳಿಸಿದಂತೆ ಸರ್ಕಾರವು ಈ ವಿಷಯದಲ್ಲಿ ನಿರ್ಲಕ್ಷ್ಯದಲ್ಲಿರುವದಿಲ್ಲ. ಆಗಿಂದಾಗ್ಗೆ ಕೊಡಗಿನ ಹವಾಲನ್ನು ಇಂಡಿಯಾ ಸರ್ಕಾರಕ್ಕೆ ತಿಳಿಸಲಾಗಿದೆ. ವಾರ್ಷಿಕ ವಂತಿಗೆಯು ಕೊಡಗಿಗೆ ನ್ಯಾಯವಾಗಿಯೂ ಸಿಗಬೇಕು. ಆದ್ದರಿಂದ ಈ ತರಾವಿನ ಉದ್ದೇಶವನ್ನು ಸ್ಥಳೀಯ ಸರ್ಕಾರವು ಈ ಮೊದಲೇ ಮನಗಂಡಿರುವದರಿಂದ ಈ ತರಾವಿನ ಅವಶ್ಯಕತೆಯಿಲ್ಲ,' ಎಂದರು ಅವರೂ ತರಾವು ಓಟಿಗೆ ಹಾಕಲ್ಪಟ್ಟು ಸರ್ಕಾರಿ ಮೆಂಬರುಗಳಲ್ಲದೆ ಎಲ್ಲರೂ ಓಟು ಕೊಟ್ಟದ್ದರಿಂದ ತರಾವು ಪಾಸಾಯಿತು.

(9) 'ಕೊಡಗಿನಲ್ಲಿ ಹೊಸ ಸೇರಿನ ಅಳತೆಯಿಂದ ಜನರಿಗೆ ಬಹಳ ತೊಂದರೆಯುಂಟಾಗುತ್ತಲಿರುವದರಿಂದ ಅದಕ್ಕೆ ತಕ್ಕ ವ್ಯವಸ್ಥೆ ಮಾಡಬೇಕು' ಎಂಬ ತರಾವು ಮೆ. ಐಚೆಟ್ಟಿರ ಸುಬ್ಬಯ್ಯನವರಿಂದ ತರ್ಪಟ್ಟಿತು. ಅವರು ತಂದಿನ ಸೇರಿನಿಂದ ವ್ಯಾಪಾರಿಯು ಯಾವ ಪ್ರಕಾರ ರೈತನಿಂದ ಹೆಚ್ಚು ಕೊಂಡುಕೊಂಡು, ಮಾರುವಾಗ್ಯೆ ಕಡಮೆ ಮಾರಿ ಹೆಚ್ಚು ಲಾಭ ಪಡೆವನೆಂದೂ ರೈತನಿಗೂ, ಕೊಳ್ಳುವನಿಗೂ ಆಗುವ ನಷ್ಟಕಷ್ಟಗಳನ್ನೂ ವಿವರಿಸಿದರು.

ಫೈನಾನ್ಸ್ ಮೆಂಬರರು—'1931ನೇ ಆಕ್ಟನ್ನು ಅನುಸರಿಸಿ 100 ತೊಲೆ ಸೇರಿನ ಅಳತೆಗೆ ಕೊಡಗಿನ ಸೇರನ್ನು ನಿಷ್ಕರ್ಷಿಸಿದ್ದಾಗಿದೆ. ಈ ವೊದಲು ಬಹಳ ವೋಸಗಳು ನಡೆಯ

ಸೂಚಕರು ಮತ್ತು ಫೈನಾನ್ಸ್ ಮೆಂಬರರು ತಮ್ಮ ಉತ್ತರವನ್ನು ಕೊಟ್ಟು ಠರಾವನ್ನು ಓಟಿಗೆ ಹಾಕಲಾಗಿ 8 ಮಂದಿ ಪರವಾಗಿಯೂ, 7 ಮಂದಿ ವಿರೋಧವಾಗಿಯೂ ಓಟು ಕೊಟ್ಟ ದ್ದರಿಂದ ಠರಾವು ಪಾಸಾಯಿತು.

(10) 'ಚೀಫ್ ಕಮಿಷನರವರ ಆಫೀಸಿನ (ಬೆಂಗಳೂರಿನಲ್ಲಿ) ಸಿಬ್ಬಂದಿಗೆ ಕೊಡಗಿನಿಂದ ಅರ್ಹರಾದವರನ್ನೇ ಆರಿಸಿಕೊಳ್ಳ ಬೇಕೆಂದಿನ್ನುವ ಠರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ಸಭೆಯ ಮುಂದಿಟ್ಟು ಈಗಿನ ಉದ್ಯೋಗವಿಲ್ಲದಿರುವ ಕಾಲದಲ್ಲಿ ಕೊಡಗಿನವರಿಗೆ ಕೆಲವು ಸ್ಥಳಗಳನ್ನು ಒದಗಿಸಬೇಕೆಂದು ಮುಂತಾಗಿ ಭಾಷಣವನ್ನು ಮಾಡಿದರು.

ಫೈನಾನ್ಸ್ ಮೆಂಬರರು ಈ ಠರಾವಿಗೆ ವಿರೋಧಿಸುವುದಿಲ್ಲವೆಂದೂ ಅವಕಾಶ ದೊರೆತಾಗ ಅರ್ಹರಾದವರನ್ನು ಆರಿಸಲಾಗುವುದೆಂದೂ ಭರವಸೆಯನ್ನಿತ್ತರು.

ಮೆ. ಒಲ್ಲಚಂಡ ಬೆಳ್ಯಪ್ಪನವರು ಠರಾವನ್ನು ಸಮರ್ಥಿಸಿದರು

ಫೈನಾನ್ಸ್ ಮೆಂಬರರು ಭರವಸೆ ಪ್ರಕಾರ ಠರಾವನ್ನು ಸೂಚಕರು ಹಿಂತೆಗೆದುಕೆ ಂಡರು.

(11) 'ಕೊಡಗಿನ ಜುಡಿಷ್ಯಲ್' ಕಮಿಷನರವರ ಕೋರ್ಟಿನ ಸಿಬ್ಬಂದಿಗೆ (ಬೆಂಗಳೂರಿನಲ್ಲಿ) ಕೊಡಗಿನಿಂದ ಅರ್ಹರಾದವರನ್ನು ಆರಿಸಿಕೊಳ್ಳಬೇಕು' ಎನ್ನುವ ಠರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ಸೂಚಿಸಿದರು

ಫೈನಾನ್ಸ್ ಮೆಂಬರರು—ಜುಡಿಷ್ಯಲ್ ಕಮಿಷನರವರ ಕೋರ್ಟಿನಲ್ಲಿ ಬರೇ ಒಬ್ಬರು ಮಾತ್ರ ಇಡೀ ಸಮಯ ಕೆಲಸ ಮಾಡುವವರು ಇರುವರು. ಈ ಸ್ಥಾನಕ್ಕೆ ಸಮಯ ಬಿದ್ದಾಗ ಅರ್ಹರಾದವರನ್ನು ಕೊಡಗಿನಿಂದ ಆರಿಸಲಾಗುವದೆಂದು ಭರವಸೆ ಇತ್ತ್ದ್ದರಿಂದ ಠರಾವನ್ನು ಸೂಚಕರು ಹಿಂತೆಗೆದುಕೊಂಡರು

(12) ಕೊಡಗಿನ ಸಿವಿಲ್ ಕೋರ್ಟುಗಳಿಗೆ ಬರುವ ಸಾಕ್ಷಿಗಳ ಭತ್ಯದ ದರವನ್ನು ಪುನರಾಲೋಚಿಸಬೇಕು" ಎಂಬ ಠರಾವನ್ನು ಮೆ ಐ ಸಿ. ಸುಬ್ಬಯ್ಯನವರು ಸೂಚಿಸಿ, ಈಗಿನ ದರವು ಒಹಳ ಹೆಚ್ಚೆಂದು ಅದನ್ನು ಪುನರಾಲೋಚಿಸಿ ತಕ್ಕ ಪ್ರಮಾಣದಲ್ಲಿಡಬೇಕೆಂದೂ ವಿವರಿಸಿದರು.

ಫೈ. ಮೆಂಬರರು—ಈ ವಿಷಯವನ್ನು ಜೆನ್ನಾಗಿ ಪರಿಶೀಲಿಸಿ ತಕ್ಕ ಏರ್ಪಾಡು ಮಾಡಲಾಗುವದೆಂದು ಭರವಸೆ ಕೊಟ್ಟ ದ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು

(13) "ಕೊಡಗಿನ ಕೈದಿಗಳನ್ನು ಮಡಿಕೇರಿಯಲ್ಲೇ ಇಡುವ ಏರ್ಪಾಡಾಗಬೇಕು" ಎನ್ನುವ ಠರಾವನ್ನು ಮೆ. ಒಲ್ಲಚಂಡ ಬೆಳ್ಯಪ್ಪನವರು ಸಭೆಯ ಮುಂದಿಟ್ಟರು.

ಫೈನಾನ್ಸ್ ಮೆಂಬರರು—ಇಲ್ಲಿ ಇಟ್ಟುಕೊಳ್ಳುವದರಿಂದ ಮದ್ರಾಸಿನ ಜೈಲುಗಳಿಗೆ ಕಳುಹಿಸುವದಕ್ಕಿಂತ ಖರ್ಚು ಹೆಚ್ಚಾಗದಿದ್ದರೆ ಹಾಗೆಯೇ ಮಾಡಲು ಆಲೋಚಿಸಲಾಗುವದೆಂದು ಭರವಸೆಯನ್ನಿತ್ತ್ದರಿಂದ ಠರಾವು ಹಿಂತೆಗೆಯಲ್ಪಟ್ಟಿತು.

(14) 'ಕೊಡಗಿನಲ್ಲಿನ ಹೈಯರ್ ಎಲಿಮೆಂಟರಿ ಶಾಲೆಗಳ ಮುಖ್ಯ ಉಪಾಧ್ಯಾಯರನ್ನಾಗಿ ಅರ್ಹರಾದವರನ್ನು, (ಗ್ರಾಜ್ಯುವೇಟರುಗಳನ್ನು ಒಳ್ಳೇದು.) ನೇಮಿಸಬೇಕೆನ್ನುವ ಠರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ಸೂಚಿಸಿದರು.

ಶಾಲಾ ಇನ್ಸ್‌ಪೆಕ್ಟರವರು, ವಿದ್ಯಾ ಇಲಾಖೆಯ ಧೋರಣೆಯೇ ಆ ಪ್ರಕಾರದ್ದಿದೆಯೆಂದೂ ಅವರು ಕ್ರಮಶಃ ಅರ್ಹರಾದವರಿಗೇನೇ ಮುಖ್ಯೋಪಾಧ್ಯಾಯರ ಹುದ್ದೆಗಳನ್ನು ಕೊಡುತ್ತಲಿರುವರೆಂದೂ ಹೇಳಿದರು.

ಠರಾವು ಓಟಿಗೆ ಹಾಕಲ್ಪಟ್ಟು 8 ಮಂದಿ ಪರವಾಗಿ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

ಕೌನ್ಸಿಲು ಸಭೆಯು ಆ ದಿನಕ್ಕೆ ಒಂಕಾಸಾಗಿ, ಮುಂದಿನ ದಿನಕ್ಕೆ ಮುಂದರಿಸಲಾಯಿತು.

ತಾ. 26-2-36.

ತಾ. 26ನೇ ಬುಧವಾರ ಕೌನ್ಸಿಲು ಸಭೆಯು 11 ಗಂಟೆಗೆ ಪುನಃ ಸೇರಿತು. ಮೆಗಳಾದ ಪುಚ್ಚಿಮಾಡ ನಾಣಯ್ಯನವರು ಮತ್ತ ತಿರುವೆಂಗಡಂಪಿಳ್ಳೆಯವರು ಗೈರ್ಹಾಜರಾಗಿದ್ದರು.

(15) "ಪೊನ್ನಂಪೇಟೆಯಲ್ಲಿ ಈಗಿರುವ ಹೈ ಎಲಿಮೆಂಟರಿ ಶಾಲೆಯನ್ನು ಒಂದು ಹೈ ಸ್ಕೂಲಾಗಿ ಮಾಡಬೇಕು"ನ್ನುವ ಠರಾವನ್ನು ಮೆ. ಚೆಪ್ಪುಡೀರ ಪೂವಯ್ಯನವರು ಈಗಿನ ಹಣದ ಅಭಾವದ ದೃಷ್ಟಿಯಿಂದ ಹಿಂತೆಗೆದುಕೊಂಡರು.

(16) 'ವೀರಾಜಪೇಟೆಯಲ್ಲಿರುವ ಸಿವಿಲ್ ಆಸ್ಪತ್ರೆಯಲ್ಲಿ ಒಬ್ಬ ಲೇಡಿ ಡಾಕ್ಟರನ್ನು ನೇಮಿಸಬೇಕು' ಎಂಬ ಠರಾವನ್ನು ಮೆ. ಐ ಸಿ. ಸುಬ್ಬಯ್ಯನವರು ಸೂಚಿಸಿದರು.

ಫೈನಾನ್ಸ್ ಮೆಂಬರರು—ಈ ವಿಷಯವನ್ನು ಆಲೋಚಿಸಲಾಗುವದೆಂದೂ ಮಡಿಕೇರಿಯಲ್ಲಿ, ಹೆರಿಗೆಗೆ ಹೆಚ್ಚು ಹೆಂಗಸರು ಬರುವುದರಿಂದ ಮಡಿಕೇರಿಯಲ್ಲಿ ಲೇಡಿ ಡಾಕ್ಟರರ ಆವಶ್ಯಕತೆಯಿರುವದೂ, ವೀರಾಜಪೇಟೆಯಲ್ಲಿರುವ ಸರ್ಜನರೇ ಅಲ್ಲಿನ ಕೆಲಸಗಳನ್ನೆಲ್ಲ, ಲೇಡಿಡಾಕ್ಟರರ ಸಾಹಾಯವಿಲ್ಲದೆ, ಮಾಡಬಹುದೆಂದೂ ತರಾವನ್ನು ವಿರೋಧಿಸಿದರು. ಅನಂತರ ಮೆ.ಗಳಾದ ಒಲ್ಲಚಂಡ ಬೆಳ್ಯಪ್ಪನವರು, ರಾ. ಬ. ಅಪ್ಪಾರಂಡ ಚಂಗಪ್ಪನವರು, ನಡಿಕೇರಿಯಂಡ ಸೋಮಯ್ಯನವರು, ರಾ. ಸಾ. ಪಾಂಡಂಡ ಚಂಗಪ್ಪನವರು ಠರಾವನ್ನು ಸಮರ್ಥಿಸಿದರು ಸೂಚಕರು ಮತ್ತು ಫೈನಾನ್ಸ್ ಮೆಂಬರರು ತಮ್ಮ ಅಖೈರು ಭಾಷಣಗಳನ್ನಿತ್ತನಂತರ ಠರಾವು ಓಟಿಗೆ ಹಾಕಲ್ಪಟ್ಟು ನಾಲ್ಕು ಸರ್ಕಾರಿ ಸದಸ್ಯರುಗಳಲ್ಲದೆ ಎಲ್ಲರೂ ಓಟು ಕೊಟ್ಟದರಿಂದ ಠರಾವು ಪಾಸಾಯಿತು.

(17) 'ಮಡಿಕೇರಿ ಆಸ್ಪತ್ರೆಯಲ್ಲಿ ಹಾಸಿಗೆಗಳ ವ್ಯವಸ್ಥೆಗೂ ಒಳ್ಳೆ ಬಿಚ್ಚುಗಿರುವ ವಸ್ತ್ರಗಳಿಗಾಗಿಯೂ ರೂ. 500 ಹೆಚ್ಚಾಗಿ ಕೂಡಬೇಕೆಂಬ ಠರಾವನ್ನು ಮೆ. ಒಲ್ಲಚಂಡ ಬೆಳ್ಯಪ್ಪನವರು ಸಭೆಗು ಮುಂದಿಟ್ಟರು.

ಫೈನಾನ್ಸ್ ಮೆಂಬರರು—ಆಸ್ಪತ್ರೆಯಲ್ಲಿ ಹೊಸ ಮಂಚಗಳನ್ನು ಕರಿಸಲು ಮತ್ತ ಒಳ್ಳೆ ಹಾಸಿಗೆ ಹೊದಿಕೆಗಳಿಗೆ ಹೆಚ್ಚು ಹಣ ಒಡ್ಡೆಟ್ಟಿನಲ್ಲಿಡಲಾಗಿದೆ. ಆದರೆ ಇನ್ನೂ ಹೆಚ್ಚಾಗಿ ಬೇಕಾಗುವ ಅವಶ್ಯಕತೆ ಇದ್ದಲ್ಲಿ ಅದಕ್ಕೆ ತಕ್ಕ ಏರ್ಪಾಡು ಮಾಡಲಾಗುವುದು.

ಫೈನಾನ್ಸ್ ಮೆಂಬರರ ಭರವಸೆ ಮೇರೆ ಠರಾವು ಹಿಂತೆಗೆಯಲ್ಪಟ್ಟಿತು.

(18) 'ವೀರಾಜಪೇಟೆ ಟೌನಿಗೆ ನೀರು ಸಂಬರಾಯು ಮಾಡಲು ತಕ್ಕ ಏರ್ಪಾಡು ಮಾಡಬೇಕು' ಎಂಬ ಠರಾವನ್ನು ಮೆ. ಐ. ಸಿ. ಸುಬ್ಬಯ್ಯನವರು ತಂದರು.

ಫೈನಾನ್ಸ್ ಮೆಂಬರರು—ವೀರಾಜಪೇಟೆ ನೀರು ಸಂಬರಾಯು ವಿಷಯದಲ್ಲಿನ ಎಲ್ಲ ಸಾಧಕಬಾಧಕಗಳನ್ನು ವಿವರವಾಗಿ ತಿಳಿಸಿ ಸರ್ಕಾರದವರು ಈ ವಿಷಯ ಸಾಧ್ಯವಾದಷ್ಟು ಗಮನವನ್ನೀಯುವರೆಂದು ಹೇಳಿದರು

ಮೆ. ಒಲ್ಲಚಂಡ ಬೆಳ್ಯಪ್ಪನವರು ಠರಾವಿಗೆ ಒತ್ತಾಸೆಯಾಗಿ ಮಾತಾಡಿದರು.

ಅನಂತರ ಠರಾವು ಓಟಿಗೆ ಹಾಕಲ್ಪಟ್ಟು 7 ಸದಸ್ಯರಲ್ಲದೆ ಬಾಕಿಯುಳಿದವರೆಲ್ಲರೂ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

(19) 'ಕೊಡಗಿನಲ್ಲಿ ವ್ಯವಸಾಯ ಅಭಿವೃದ್ಧಿಯ ಕಾರ್ಯಗಳಿಗೂ ಮತ್ತು ಜನರಿಗೆ ಒಳ್ಳೆ ವ್ಯವಸಾಯ ಮಾಡುವ ವಿಧಾನದಲ್ಲಿ ತಿಳುವಳಿಕೆ ಕೊಡಲೂ ಅನೇಕಡೆಗಳಲ್ಲಿ ಪರೀಕ್ಷಾ ಕ್ಷೇತ್ರಗಳನ್ನು ತೆರೆಯಬೇಕು' ಎಂಬ ಠರಾವನ್ನು ಮೆ. ಒಲ್ಲಚಂಡ ಬೆಳ್ಯಪ್ಪನವರು ಸೂಚಿಸಿ ಕೊಡಗಿನಲ್ಲಿ ವ್ಯವಸಾಯದ ಅಭಿವೃದ್ಧಿಗೆ ಸರ್ಕಾರದವರು ಆಶ್ಚರ್ಯ ಮಾಡಲೇ ಬೇಕಾದ ಕಾರ್ಯಗಳನ್ನು ಕುರಿತು ವಿವರಿಸಿ ಭಾಷಣ ಮಾಡಿದರು.

ಫೈನಾನ್ಸ್ ಮೆಂಬರರು—ಈ ವಿಷಯದಲ್ಲಿ ಸೂಚಕರ ಅಭಿಪ್ರಾಯದಂತೆಯೇ ನನ್ನ ಅಭಿಪ್ರಾಯವಿದೆ. ಹಾಗೂ ಈ ಇಲಾಖೆಯನ್ನು ವೃದ್ಧಿಗೊಳಿಸಲು ತಕ್ಕ ಏರ್ಪಾಡು ಮಾಡ ಬೇಕೆಂದು ಸರ್ಕಾರದ ಅಭಿಪ್ರಾಯವಿದೆ ಎಂದು ಹೇಳಿದರು. ರಾ. ಬ. ಅಪ್ಪಾರಂಡ ಚಂಗಪ್ಪನವರು ನುಡಿದು, ಮೆ. ಐ. ಸಿ. ಸುಬ್ಬಯ್ಯನವರು ಠರಾವಿಗೆ ಒತ್ತಾಸೆಯನ್ನಿತ್ತರು. ಅನಂತರ ಠರಾವನ್ನು ಓಟಿಗೆ ಹಾಕಲಾಗಿ 10 ಮಂದಿ ಪರವಾಗಿ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

(20) "ಕೊಡಗಿನ ಜಮೀನುಗಳ ಮಂಜನ್ನು ಶಾಶ್ವತ ವಾಗಿ ಪರೀಕ್ಷೆ ಮಾಡಲು ಏರ್ಪಾಡು ಮಾಡಬೇಕು" ಎಂಬ ಠರಾವನ್ನು ಮೆ. ನಡಿಕೇರಿಯಂಡ ಸೋಮಯ್ಯನವರು ಸೂಚಿಸಿದರು.

"ಫೈನಾನ್ಸ್ ಮೆಂಬರರು—ಜೀರೆ ಪ್ರಾಂತ್ಯಗಳಿಗೆ ನಮ್ಮ ಮಣ್ಣನ್ನು ಕಳುಹಿಸಿದ್ದು ಕೆಲವು ಪರೀಕ್ಷಿಸಲ್ಪಡದೆ ಹಿಂತಿರುಗಿದವು; ಮೈಸೂರಿನವರು ಮಾತ್ರ ಪರೀಕ್ಷಿಸಿರುವರು ನಮಗೇನೇ ಪ್ರತ್ಯೇಕವಾಗಿ ಒಂದು ಲೇಬರೇಟರಿ ಇಡಲು ಹಣದ ಅಭಾವದಿಂದಾಗುವದಿಲ್ಲ. ಈ ವಿಷಯದಲ್ಲಿ ಒಳ್ಳೆ ಸೂಚನೆಗಳನ್ನು ಸರಕಾರವು ಆಲೋಚನೆ ಮಾಡಲುಸಿದ್ದವಿದೆ" ಎಂದರು.

ಮೆ ಬಲ್ಲಚಂಡ ಬೆಳ್ಯಪ್ಪನವರು ಮತ್ತು ಐ ಸಿ. ಸುಬ್ಬಯ್ಯನವರು ಒತ್ತಾಸೆಯಾಗಿ ಮಾತನಾಡಿದರು. ಠರಾವು ಓಟಿಗೆ ಹಾಕಲ್ಪಟ್ಟು 10 ಮಂದಿ ಪರವಾಗಿ ಓಟು ಕೊಟ್ಟದ್ದರಿಂದ ಪಾಸಾಯಿತು.

(21) "ಮುಂದಕ್ಕೆ ನೇಮಿಸಲ್ಪಡುವ ಎಡೆ. ಕೊ. ಅ. ಇನ್ಸ್‌ಪೆಕ್ಟರುಗಳ ಹುದ್ದೆಗೂ, ಕೊ. ಅ. ಇಲಾಖೆಗೆ ಒಬ್ಬ ಗುವಸ್ತನ ಹುದ್ದೆಗೂ ಕೊ. ಅ ಸರ್ವರ್ ಪ್ಲೆಜರುಗಳನ್ನು ಆರಿಸಬೇಕು"ನ್ನುವ ಠರಾವನ್ನು ಮೆ. ಕೊಂಗಡ ಗಣಪತಿಯವರು ಸೂಚಿಸಿದರು.

ಫೈನಾನ್ಸ್ ಮೆಂಬರರು—ಅರ್ಹರಾದ ಕೊ. ಅ. ಸುಪರ್ ವೈಜರುಗಳು ದೊರೆತಲ್ಲಿ ಸಮಯ ಬಂದಾಗ ಅವರನ್ನು ಕೊ. ಅ. ಇನ್ಸ್‌ಪೆಕ್ಟರುಗಳಾಗಿ ಆರಿಸುವ ಆಲೋಚನೆ ಮಾಡಲಾಗುವದು. ಆದರೆ ಅವನ್ನೇ ಆರಿಸುವ ಭರವಸೆ ಕೊಡಲಾಗುವದಿಲ್ಲ.' ಎಂದರು.

ಸಭೆಯು ಮಧ್ಯಾಹ್ನದ ಊಟಕ್ಕಾಗಿ ಮುಂದರಿಸಲ್ಪಟ್ಟಿತು.

ಅಪರಾಹ್ನ 2—15 ಗಂಟೆ.

ಮೆ. ಐ. ಸಿ. ಸುಬ್ಬಯ್ಯನವರು ಜರ್ಜೆಯಾಗುತ್ತಿದ್ದ ಠರಾವಿಗೆ ಒತ್ತಾಸೆಯಾಗಿ ಮಾತನಾಡಿದರು.

ಅನಂತರ ಠರಾವನ್ನು ಹಿಂತೆಗೆಯಲಾಯಿತು.

(22) 'ಎಗ್ಸಿಕ್ಯುಟಿವ್ ಪರ್ಸನಲ್ ಅಸಿಸ್ಟೆಂಟರ ಹುದ್ದೆಯನ್ನು ವಜಾ ಮಾಡಬೇಕೆಂದಿನ್ನುವ ಠರಾವನ್ನು ಮೆ, ಒಲ್ಲಚಂಡ ಬೆಳ್ಯಪ್ಪನವರು ತಂದರು. ಫೈನಾನ್ಸ್ ಮೆಂಬರರು ಆ ಹುದ್ದೆಯು ವಜಾ ಮಾಡಿದಲ್ಲಿ ಕಾರ್ಯನಿರ್ವಾಹಕ್ಕೆ ಕುಂದಕವಾಗುವದೆಂದು ವಿರೋಧಿಸಿದರು

ಠರಾವು ಹಿಂತೆಗೆಯಲ್ಪಟ್ಟಿತು.

III ಕಳೆದ ಕೌನ್ಸಿಲಿನಲ್ಲಿ ಜರ್ಜೆಯಾಗದೆ ಮುಂದರಿಸಿದ್ದ ಠರಾವುಗಳು ಈ ದಿನ ಜರ್ಜೆಗೆ ಬಂದವು.

(85) 'ಗ್ರಾಮಗಳಿಂದ ಎರಡು ಮೈಲು ಅಂತರದಲ್ಲಿರುವ ಫಾರೆಸ್ಟುಗಳಲ್ಲಿ ಗ್ರಾಮಸ್ಥರ ದನಗಳನ್ನು ಮುಫತ್ತಾಗಿ ಮೇಯಿಸಲು ಅವಕಾಶ ಕೊಡಬೇಕೆಂದು ಈ ಸಭೆಯು ಚೀಫ್ ಕಮಿಷನರವರಿಗೆ ಸಿಫಾರಸ್ಸು ಮಾಡುತ್ತದೆ' ಎಂಬ ಠರಾವನ್ನು ಮೆ. ಚವುಡ್ಲು ಕಾಳಪ್ಪನವರು ಸೂಚಿಸಿದರು.

ಮೆ. ಹಂಡ್ಲಿ ಚೆನ್ನಮಲ್ಲಪ್ಪನವರು ಅನುಮೋದಿಸಿದರು

ಚೀಫ್ ಫಾರೆಸ್ಟ್ ಆಫೀಸರು ವಿರೋಧಿಸಿದರು.

ಅನಂತರ ಮೆ. ಗಳಾದ ಐ. ಸಿ. ಸುಬ್ಬಯ್ಯನವರು ಮತ್ತ ಒಲ್ಲಚಂಡ ಬೆಳ್ಯಪ್ಪನವರು ಠರಾವಿಗೆ ಒತ್ತಾಸೆಯಾಗಿ ಮಾತನಾಡಿದರು.

ಠರಾವು ಓಟಿಗೆ ಹಾಕಲ್ಪಟ್ಟು 11 ಮಂದಿ ಪರವಾಗಿ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತು.

(9) 'ಮೆ. ಪುಚ್ಚಿಮಾಡ ನಾಣಯ್ಯನವರು ಗೈರ್ಹಾಜರಾದ್ದರಿಂದ ಗಂಧದ ಕರಡು ರೂಲ್ಸುಗಳನ್ನು ತಯಾರಿಸಲು ಉದ್ಯೋಗಸ್ಥ ಮತ್ತು ಉದ್ಯೋಗಸ್ಥರಲ್ಲದವರ ಕಮಿಟಿಯೊಂದನ್ನು ನೇಮಿಸಬೇಕು' ಎಂಬ ಅವರ ಠರಾವು ಜರ್ಜೆಗೆ ಬರಲಿಲ್ಲ

(98) 'ಉದ್ಯೋಗಸ್ಥರಲ್ಲದವರ ಬಹುಮತವಿರುವ ಒಂದು ಕಮಿಟಿಯನ್ನು ಗಂಧದ ಮರಕ್ಕೆ ಬೋನಸ್ಸು ಕೊಡುವ ಕುರಿತು ನಿಬಂಧನೆಗಳನ್ನು ಅಜಮಾಯಿಸಲು ನೇಮಿಸುವಂತೆ ಈ ಸಭೆಯು ಚೀಫ್ ಕಮಿಶನರವರಿಗೆ ಶಿಫಾರಸ್ಸು ಮಾಡುತ್ತದೆ.' ಎಂಬ ಠರಾವನ್ನು ಮೆ. ಬಲ್ಲಚಂಡ ಬೆಳ್ಯಪ್ಪನವರು ಸಭೆಯ ಮುಂದಿಟ್ಟು, ವಿವರಿಸಿ ಭಾಷಣ ಮಾಡಿದರು.

ಮೆ. ನಡಿಕೇರಿಯಂಡ ಸೋಮಯ್ಯನವರು ಠರಾವನ್ನು ಅನುಮೋದಿಸಿದರು.

ಚೀಫ್ ಫಾರೆಸ್ಟ್ ಆಫೀಸರು—ಬೋನಸ್ಸನ್ನು ಕೊಡಲು ಏರ್ಪಟ್ಟಿರುವ ಕರಡು ರೂಲ್ಸುಗಳನ್ನು ಮೈಸೂರು ಯೂ ತರ ಕಡೆಗಳ ರೂಲ್ಸುಗಳೊಡನೆ ಹೋಲಿಸಿದಲ್ಲಿ ಇದು ಬಹಳ ದಾರಾಳದ್ದಾಗಿದೆಯೆಂದೂ ಇವುಗಳನ್ನು ಇನ್ನೂ ಪರೀಕ್ಷಿಸಿ ಸಡಲಿಸುವ ಅವಶ್ಯಕತೆ ಇಲ್ಲವೆಂದೂ ವಿರೋಧಿಸಿದರು.

ಮೆ. ಚವುಡ್ಲು ಕಾಳಪ್ಪನವರು—ಈ ರೂಲ್ಸುಗಳನ್ನು ಕುರಿತು ಅತೃಪ್ತಿಯು ಬಹಳವಾಗಿದೆ. ಈ ರೂಲ್ಸುಗಳು ಜಾರಿಗೆ ಬಂದಲ್ಲಿ ಗಂಧದ ಮೂಲೀಕರಿಗೆ ಬೋನಸ್ಸು ಸಿಗುವ ಸಂಭವವೇ ಇಲ್ಲದಂತಾಗುತ್ತದೆಯೆಂದರೆ ಅತಿಶಯೋಕ್ತಿಯಾಗಲಾರದು. ಇವುಗಳನ್ನು ಜೆನ್ನಾಗಿ ಪರಿಶೋಧಿಸಿ ಮೂಲೀಕರಿಗೆ ನ್ಯಾಯವಾದ ಪಾಲು ದೊರೆಯುವಂತೆ ರೂಲ್ಸುಗಳನ್ನು ರಚಿಸಲು ಒಂದು ಕಮಿಟಿಯನ್ನು ಠರಾವಿನಲ್ಲಿ ಕಾಣಿಸಿದಂತೆ ನಿರ್ಮಿಸುವದು ಅವಶ್ಯಕ. ಕಡಿಮೆ ಪಕ್ಷ ಒಟ್ಟಿನಲ್ಲಿ ಶೇಕಡ 50% ರಷ್ಟು ಪ್ರತಿಫಲ ರೈತನಿಗೆ ಸಿಗಬೇಕು' ಎಂದು ಠರಾವನ್ನು ಸಮರ್ಥಿಸಿದರು.

ಮೆ. ಹಂಡ್ಲಿ ಚೆನ್ನಮಲ್ಲಪ್ಪನವರು—'ದೇಶದಲ್ಲೆಲ್ಲ ಈ ಸಂಬಂಧ ಅತೃಪ್ತಿಯುಂಟಾದದ್ದು ಸರ್ಕಾರಕ್ಕೆ ತಿಳಿಯದ್ದಲ್ಲ. ಈ ನಿಬಂಧನೆಗಳಿಂದ ಪ್ರಯೋಜನವಿಲ್ಲ. ಬೆಳೆಸಿದವನಿಗೆ ಕಮ್ಮಿ ಪಕ್ಷ 75% ರಷ್ಟಾದರೂ ಸಿಗಬೇಕು. ಅಕಸ್ಮಾತ್ ಬಿದ್ದ ಮರಗಳಿಗೂ ಪೂರ್ತಿ ಬೋನಸ್ಸು ಕೊಡಲೇ ಬೇಕು. ಈ ವಿಷಯ ತಕ್ಕ ಪರಿಶೀಲನೆ ನಡೆಸಲು ಒಂದು ಕಮಿಟಿಯನ್ನು ಏರ್ಪಡಿಸಲೇ ಬೇಕು' ಎಂದು ಠರಾವಿಗೆ ಒತ್ತಾಸೆಯನ್ನಿತ್ತರು.

ಫೈನಾನ್ಸ್ ಮೆಂಬರರು—'ರೂಲ್ಸುಗಳು ಜಾರಿಗೆ ಬರುವ ಮುಂಚೆ ಇನ್ನೂ ರೂಪಿತವಾಗಲಿವೆ. ಅದಕ್ಕಾಗಿಯೇ ವಿರೋಧಗಳನ್ನು ಸೂಚಿಸಲು ಸಮಯವನ್ನಿಟ್ಟದ್ದು. ಅಲ್ಲದೆ ಈಚೆಗೆ ಅವಧಿಯನ್ನು ಮುಂದರಿಸಿರುತ್ತಾರೆ ಇದರಿಂದ ಯಾವ ವಿರೋಧವನ್ನಾದರೂ ಸರ್ಕಾರವು ಆಲೋಚನೆಗೆ ತೆಗೆದುಕೊಳ್ಳುವ ಕಾರಣ ಪ್ರತ್ಯೇಕ ಒಂದು ಕಮಿಟಿಯ ಅವಶ್ಯವಿಲ್ಲ' ಎಂದು ವಿರೋಧಿಸಿದರು.

ಮೆ. ಗಳಾದ ಚವುಡ್ಲು ಕಾಳಪ್ಪನವರು, ಮತ್ತು ಹಂಡ್ಲಿ ಚೆನ್ನಮಲ್ಲಪ್ಪನವರು ಒತ್ತಾಸೆಯಾಗಿ ಮಾತನಾಡಿದರು. ಕಮಿಶನರವರು ವಿರೋಧಿಸಿ ಹೇಳಿದ್ದೇನೆಂದರೆ—

ಠರಾವು ಓಟಿಗೆ ಹಾಕಲ್ಪಟ್ಟು 5 ಮಂದಿ ಪರವಾಗಿಯೂ, 6 ಮಂದಿ ವಿರೋಧವಾಗಿಯೂ ಓಟು ಕೊಟ್ಟದ್ದರಿಂದ ಠರಾವು ಪಾಸಾಯಿತ.

(99) ಮೇಲಿನ ಉದ್ದೇಶದ ತಮ್ಮ ಠರಾವನ್ನು ಮೆ. ಹಂಡ್ಲಿ ಚೆನ್ನಮಲ್ಲಪ್ಪನವರು ಹಿಂತೆಗೆದುಕೊಂಡರು.

(105) 'ಗೇಣಿ ಮೂಲೆಗಳನ್ನು ಈಗ ಗೇಣಿ ಕೊಡುವ ವಿಧಾನವನ್ನು ನಿಲ್ಲಿಸಿ ಖಾಯಂ ಆಗಿ ಈ ವ್ಯಾಂತ್ಯದವರಿಗೆ ಕೊಡಬೇಕೆಂದು ಈ ಸಭೆಯು ಚೀಫ್ ಕಮಿಶನರವಂಗೆ ಸಿಫಾರಸು ಮಾಡುತ್ತದೆ" ಎಂಬ ಠರಾವನ್ನು ಮೆ. ಬಲ್ಲಚಂಡ ಬೆಳ್ಯಪ್ಪನವರು ಸೂಚಿಸಿ ಅದನ್ನು ಕುರಿತು ವಿವರವಾದ ಭಾಷಣವನ್ನು ಮಾಡಿದರು.

ಮೆ. ನಡಿಕೇರಿಯಂಡ ಸೋಮಯ್ಯನವರು ಈ ಠರಾವನ್ನು ಅನುಮೋದಿಸಿದರು.

ಚೀಫ್ ಫಾರೆಸ್ಟ್ ಆಫೀಸರರು ಇದನ್ನು ವಿರೋಧಿಸಿದರು.

ಮೆ. ಐ. ಸಿ. ಸುಬ್ಬಯ್ಯನವರು ಮತ್ತು ರಾ. ಸಾ. ಬಿ. ಶ್ರೀಪತಿರಾಯರು ಈ ಠರಾವಿನ ತತ್ವವು ಅಷ್ಟು ಉತ್ತಮವಾದದ್ದಲ್ಲವೆಂದು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದರು.

ಫೈನಾನ್ಸ್ ಮೆಂಬರರು ವಿರೋಧಿಸಿದರು, ಠರಾವು ಹಿಂತೆಗೆಯಲ್ಪಟ್ಟಿತು

ಈ ಅಧಿವೇಶನದ ಕಾರ್ಯಕ್ರಮಗಳು ಮುಗಿದದ್ದರಿಂದ ಸಭೆಯು 4-30 ಗಂಟೆಗೆ ಬರಕಾಸ್ತಾಯಿತು.

ಕೊಡಗು

ಮಾರ್ಚ್ ತಾ. ೬ನೇ ಶುಕ್ರವಾರ ೧೯೩೬.

ನ್ಯಾಯಸಿಧಾಯಕ ಸಭೆಯು ವಿೂಟಿಂಗು.

ಕೊಡಗು ಲೆಜಿಸ್ಲೇಟಿವ್ ಕವುನ್ಸಿಲಿನ ಕಳೆದ ವಿೂಟಿಂಗಿನಲ್ಲಿ ಚರ್ಚಿಸಲ್ಪಟ್ಟ ಠರಾವುಗಳ ಪೈಕಿ ಕಂದಾಯದಲ್ಲಿ ಒಂದು ಭಾಗವನ್ನು ವೂಫಿ ಬಿಡಬೇಕೆಂಬುದೇ ಪ್ರಾಮುಖ್ಯವಾದುದು. ಕಂದಾಯದ ವಿೂಲರಲ್ಲಿ ಒಂದು ಭಾಗವನ್ನು ವೂಫಿ ಬಿಡಬೇಕೆಂಬ ಗೊತ್ತುವಳಿಯೊಂದು ವೊದಲೇ ಕಳುಹಿಸಲ್ಪಟ್ಟಿದ್ದರೂ ಕೂಡ ವಿೂಟಿಂಗಿನಲ್ಲಿ ಸೂಚಕರು ಅದನ್ನು ವಾಪಸು ತೆಗೆದುಕೊಂಡುರು. ಇದಕ್ಕೆ ಕಾರಣವೇನೆಂದು ಗೊತ್ತಾಗಲಿಲ್ಲ, ಇಷ್ಟರ ವಟ್ಟಿಗಿನ ರಿಯಾಯಿತಿಯು ರೈತರಿಗೆ ಅವಶ್ಯವಿಲ್ಲವೆಂದು ಅವರು ಹಾಗೆ ವಾಪಸು ತೆಗೆದುಕೊಂಡಿರಲಿಕ್ಕಿಲ್ಲವಾಗಿ ನಂಬುತ್ತೇವೆ. ಅಂಥಾ ರಿಯಾಯಿತಿಯು ಅವಶ್ಯವಿಲ್ಲವಾಗಿದ್ದರೆ ಅವರು ಆ ಠರಾವನ್ನು ಕಳುಹಿಸುತ್ತಲೇ ಇದ್ದಿಲ್ಲ. ಕಳುಹಿಸಿದ ಮೇಲೆ ಅವರು ಅದನ್ನು ಚರ್ಚಿಸಿ ಸಭೆಯ ತೀರ್ವಾನಕ್ಕೆ ಬಿಡಬೇಕಾಗಿತ್ತು. ವಿೂಟಿಂಗಿಗೆ ಬಂದ ಮೇಲೆ ಅಷ್ಟು ದೊಡ್ಡ ರಿಯಾಯಿತಿಗೆ ಸರ್ಕಾರದವರು ಒಪ್ಪಿಯಾರೋ ಎಂಬ ಸಂಶಯವು ಸೂಚಕರ ವನಸ್ಸಿಗೆ ಹೊಳೆದಿರಬಹುದೇ? ಹಾಗಿದ್ದರೆ. ಈಗ ಪಾಸಾಗಿರುವ ಶೇಕಡ 25 ರಷ್ಟು ವೂಫಿಗೆ ಸರ್ಕಾರದವರು ಸಮ್ಮತಿಸುವರೆಂಬ ಭರವಸೆಯೇನು? ಆದುದರಿಂದ ರೈತರ ಬೇಡಿಕೆಯನ್ನು ಸರ್ಕಾರದವರ ವುಂದಿಡುವುದು ದೇಶದ ಪ್ರತಿನಿಧಿಗಳ ಕರ್ತವ್ಯವಾಗಿದೆ, ಅವಕ್ಕೆ ಸರ್ಕಾರದವರು ಒಪ್ಪಲಿ, ಯೂ ಬಿಡಲಿ, ಅದು ಪ್ರತಿನಿಧಿಗಳ ಜವಾಬ್ದಾರಿಯಲ್ಲ. ಹೇಗೂ ಶೇಕಡ 25ರಷ್ಟು ಕಂದಾಯವನ್ನಾದರೂ ವೂಫಿ ಬಿಡಬೇಕೆಂಬ ಠರಾವು ಕೌನ್ಸಿಲಿನಲ್ಲಿ ಒಹುಮತದಿಂದ ಪಾಸಾದುದು ಕೃಷ್ಟಿಕರವಾಗಿದೆ, ಸರ್ಕಾರಿ ವೆಂಬರುಗಳು ಈ ಗೊತ್ತುವಳಿಯನ್ನು ವಿರೋಧಿಸದೆ, ರೈತರ ಕಷ್ಟನಷ್ಟಗಳನ್ನು ಅರಿತವರಂತೆ ಸಹಾನುಭೂತಿಯನ್ನು ತೋರಿಸಿದರು, ಆದರೆ ಈ ಸಹಾನುಭೂತಿಯು ಫಲಿತಾಂಶವೇನೆಂದು ವೂತ್ರ ನಿಶ್ಚಯವಾಗಿ ಹೇಳಲಿಲ್ಲ: ಕವುನ್ಸಿಲಿನಲ್ಲಿಯ ಚರ್ಚೆಯನ್ನು ನೋಡಿ ಚೀಫ್ ಕವಿಷನರವರು ಎಷ್ಟರ ವಟ್ಟಿಗೆ ರಿಯಾಯಿತಿ ತೋರಿಸಬೇಕೆಂಬುದನ್ನು ನಂತರ ನಿಶ್ಚಯಿಸುವರೆಂದು ಹೇಳಿದರು. ಆದರೆ ಕಂದಾಯ ವೂಫಿಯನ್ನು ಕುರಿತ ಠರಾವುಗಳು ಕವುನ್ಸಿಲು ಆಫೀಸಿಗೆ ವೊದಲೇ ಕಳುಹಿಸಲ್ಪಟ್ಟಿದ್ದವು, ಸರ್ಕಾರದವರು ಈ ವಿಚಾರದ ಚರ್ಚೆ ಗೆ ತಯಾರಾಗಿಯೇ ಒಂದಿದ್ದರು, ಚೀಫ್ ಕವಿಷನರವರು ಕವುನ್ಸಿಲಿನ ಅಧ್ಯಕ್ಷರಾಗಿ ಚರ್ಚೆಯನ್ನೆಲ್ಲಾ ಏನಂವಾಗಿ ಕೇಳಿದರು. ಅಂದಮೇಲೆ ಅವರು ಇಂತಿಷ್ಟೇ ಕಂದಾಯವನ್ನು ವೂಫಿ ಬಿಡಲಾಗುವದೆಂದು ಕವುನ್ಸಿಲ್ ವಿೂಟಿಂಗಿನಲ್ಲಿಯೇ ನಿಶ್ಚಿತವಾಗಿ ಹೇಳಒಹುದಾಗಿತ್ತು. ವದ್ರಾಸು ಪ್ರಾಂತ್ಯದ ನ್ಯಾಯಸಿಧಾಯಕ ಸಭೆಯು ವಿೂಟಿಂಗಿನಲ್ಲಿಯೇ ಸರ್ಕಾರಿ ವೆಂಬರು ಎಷ್ಟರ ವಟ್ಟಿಗೆ ಕಂದಾಯ ವೂಫಿ ಬಿಡಲಾಗುವದೆಂಬುದನ್ನು ಹೇಳಿಬಿಟ್ಟರು. ಇಲ್ಲಿಯೂ ಹಾಗೆಯೇ ಹೇಳಿದ್ದರೆ ಪ್ರತಿನಿಧಿಗಳಿಗೂ, ರೈತರಿಗೂ ಸ್ವಲ್ಪ ವಟ್ಟಿಗೆ ಸಮಾಧಾನ ವುಂಟಾಗುತ್ತಿತ್ತು. ಸಾವಕಾಶ ವೂಡುವುದರಿಂದ ಹೆಚ್ಚಿನ ಪ್ರಯೋಜನವೇನಾದರೂ ಇರಬಹುದೇ?

ಸರ್ಕಾರದವರು ವ್ಯವಸಾಯಗಾರರ ನಿಜವಾದ ಕಷ್ಟನಷ್ಟಗಳನ್ನು ಅರಿತುಕೊಂಡಿದ್ದ ಪಕ್ಷದಲ್ಲಿ ಕವುನ್ಸಿಲಿನಲ್ಲಿ ಪಾಸಾದಂತೆ ಶೇಕಡ 25ರಷ್ಟು ಕಂದಾಯವನ್ನಾದರೂ ವೂಫಿ ವೂಡಲು ನಿಶ್ಚಯಿಸುವರು, ಆದರ ಬದಲು, ಸಹಾನುಭೂತಿ ತೋರಿಸಬೇಕೆಂಬ ನೆಪದಿಂದ ವೂತ್ರ ರಿಯಾಯಿತಿ ಕೊಡುವದಾದರೆ ಕಳೆದ ವರ್ಷದಂತೆ ರೂಪಾಯಿಗೆ ಬರೇ ಎರಡಾಣೆಯಂತೆ ವೂಫಿ ಬಿಡುವರು, ಕಳೆದ ವರ್ಷದಂಥ ಅಲ್ಪ ಸ್ವಲ್ಪದ ರಿಯಾಯಿತಿಯಿಂದ ರೈತರ ಕಷ್ಟ ನಿವಾರಣೆಗೆ ಹೆಚ್ಚಿನ ಸಹಾಯವಾಗಲಾರದು, ಕವುನ್ಸಿಲಿನವರ ಕೋರಿಕೆಯೇ ಬಹು ಕಡವೆಯಾಗಿದೆ. ಅದನ್ನಾದರೂ ಸರ್ಕಾರದವರು ನೆವೇರಿಸಿಕೊಡದಿದ್ದರೆ ಅವರು ಪ್ರಜೆಗಳ ಹಿತವನ್ನು ಎಷ್ಟರ ವಟ್ಟಿಗೆ ಚಿಂತಿಸುವವರು ಎಂಬುದು ವ್ಯಕ್ತವಾಗುವುದು

ಅನ್ ರಿಡೀವ್ಡ್ ಜಾಗದಲ್ಲಿರುವ ಗಂಧದೆ ವರಗಳಿಗೆ ಬೋನಸು ಕೊಡುವುದನ್ನು ಕುರಿತ ನಿಬಂಧನೆಗಳ ತಿದ್ದುಪಡಿ ಒಗ್ಯೆ ಉದ್ಯೋಗಸ್ಥರಲ್ಲದ ವೆಂಬರುಗಳ ಒಹುವತಕ್ಕರಿರುವ ಒಂದು ಕವಿಟಿಯನ್ನು ನೇವಿಸಬೇಕೆಂಬುದೇ ಇನ್ನೊಂದು ವುಖ್ಯವಾದ ಗೊತ್ತುವಳಿ. ಈ ಠರಾವನ್ನು ಸರ್ಕಾರದವರು ವಿರೋಧಿಸಿದರೂ ಒಹುವತದಿಂದ ಪಾಸಾದುದು ಸಂತೋಷಕರ. ಚೀಫ್ ಕವಿಷನರವರು ಪ್ರಕಟಿಸಿರುವ ನಿಬಂಧನೆಗಳಿಂದ ಗಂಧದ ವೂಲೀಕರಿಗೆ ಹೆಚ್ಚೇನೂ ಪ್ರಯೋಜನವಾಗಲಾರದೆಂದು ಈ ವೊದಲೇ ಬರೆದಿದ್ದೆವು. ಈ ಸಂಬಂಧ ದೇಶದ ಹಲವು ಕಡೆಗಳಲ್ಲಿ ಸಾರ್ವಜನಿಕ ಸಭೆಗಳು ಸೇರಿ ಅತೃಪ್ತಿಯನ್ನು ಸೂಚಿಸಲಾಗಿದೆ. ಜನರ ಕೋರಿಕೆ ವೇರೆ ಈ ನಿಬಂಧನೆಗಳನ್ನು ಕನ್ನಡದಲ್ಲಿ ಪ್ರಕಟಿಸಿದಲ್ಲದೆ ಆಕ್ಷೇಪಗಳನ್ನು ಕಳುಹಿಸಲು ವೂರ್ಚಿ ಆಖೈರು ವರೆಗೆ ಸಮಯ ವುಂದರಿಸಿದ್ದಕ್ಕೆ ಸರ್ಕಾರದವರಿಗೆ ವಂದಿಸಬೇಕಾಗಿದೆ. ಇವೆರಡು ಚಿಕ್ಕ ವಿಷಯಗಳಲ್ಲಿ ಸರ್ಕಾರದವರು ಜನರ ಕೋರಿಕೆಯನ್ನು ನಡಿಸಿಕೊಟ್ಟು ಅವರ ವುಖ್ಯ ಕೋರಿಕೆಗೆ ಲಕ್ಷ್ಯ ಕೊಡದೆ ಇರುವುದು ವಿಷಾದಕರ.

ರೈತರ ಸ್ವಂತ ಜಾಗಗಳಲ್ಲಿ ಗಂಧದ ವರಗಳನ್ನು ಬೆಳೆಸಲು ಅವರಿಗೆ ಉತ್ತೇಜನ ಕೊಟ್ಟು, ಆ ವೂಲಕ ಸರ್ಕಾರದ ಗಂಧದ ಉತ್ಪತ್ತಿಯನ್ನು ಹೆಚ್ಚಿಸಿಕೊಳ್ಳುವುದೇ ಈ ಕರಡು ನಿಬಂಧನೆಗಳ ಉದ್ದೇಶ. ಅಂದ ವೇಲೆ ಆ ನಿಬಂಧನೆಗಳು ರೈತರಿಗೆ ಒಪ್ಪುವಂಥಾವಾಗಿರಬೇಕಲ್ಲವೇ? ಇಲ್ಲವಾದರೆ ಅವುಗಳಿಂದ ರೈತರು ಗಂಧ ಬೆಳೆಸಲು ಪ್ರೋತ್ಸಾಹಿಸಲ್ಪಡುವುದು ಹೇಗೆ? ಆದುದರಿಂದಲೇ ಜನರಿಗೆ ಒಪ್ಪುವಂತೆ ನಿಬಂಧನೆಗಳನ್ನು ತಿದ್ದು ಪಡಿ ವೂಡಲು ದೇಶದಲ್ಲಿ ಸಂಚರಿಸುವ, ಜನರ ಪ್ರತಿನಿಧಿಗಳ ಬಹುಮತವಿರುವ ಕವಿಟಿಯೊಂದನ್ನು ನೇವಿಸಬೇಕೆಂದು ಜನರು ಕೇಳಿಕೊಂಡಿದ್ದಾಗಿದೆ. ಅದೇ ವೇರೆ ಕೌನ್ಸಿಲಿನಲ್ಲಿ ಈ ಸಂಬಂಧದ ಠರಾವು ಚರ್ಚಿಸಲ್ಪಟ್ಟಿದ್ದಾಗಿದೆ. ಈ ಠರ್ತಾವನ್ನು ಒಪ್ಪಿಕೊಂಡರೆ ಇಂಥಾ ನಿಬಂಧನೆಗಳನ್ನು ವೂಡುವಾಗಲ್ಲೆಲ್ಲಾ ಕವಿಟಿಗಳನ್ನು ನೇವಿಸಬೇಕಾಗುವದೆಂದೂ, ಈ ನಿಬಂಧನೆಗಳನ್ನನುಸರಿಸಿ ನಡೆಸಬೇಕೆಂಬ ಬಲತ್ಕಾರವು ಯಾರ ವೇಲೆಯೂ ಇಲ್ಲವೆಂದೂ, ಸಮಯವನ್ನು ವುಂದರಿಸಿರುವದರಿಂದ ಆಕ್ಷೇಪಗಳನ್ನು ಚೀಫ್ ಕವಿಷನರವರಿಗೆ ಕಳುಹಿಸಬಹುದೆಂದೂ ಸರ್ಕಾರಿ ವೆಂಬರರು ವಾದಿಸಿದರು. ಇಂಥಾ ನಿಬಂಧನೆಗಳನ್ನು ವೂಡುವ ಅಧಿಕಾರವನ್ನು ಕವಿಟಿಯವರಿಗೆ ಕೊಡಲು ಚೀಫ್ ಕವಿಷನರವರಿಗೆ ವನಸ್ಸಿಲ್ಲದಿರಬಹುದು. ಆದರೆ ಜನರು ತಾವಾಗಿ ಅನುಸರಿಸಿ ನಡೆಯಬೇಕಾದ ನಿಬಂಧನೆಗಳನ್ನು ವೂಡಬೇಕಾದರೆ, ಅದು ಅವರ ಪ್ರತಿನಿಧಿಗಳಿಂದಲೇ ಆಗಬೇಕಾಗಿದೆ ಎಂಬುದನ್ನು ಅಧಿಕಾರಿಗಳು ವರೆಯಬಾರದು ಈ ನಿಬಂಧನೆಗಳ ವಿಷಯದಲ್ಲಿ ಒಳಾತೆಕ್ಕಾರವೇನಾ ಇಲ್ಲದಿರಬಹುದು. ಆದರೆ ಅವುಗಳನ್ನು ಆಗುವಷ್ಟು ಹೆಚ್ಚಿನ ಜನರು ಉಪಯೋಗಿಸುವಂತೆ ವೂಡದಹೋದರೆ ಅವುಗಳ ಉದ್ದೇಶವೇ ಕೈಗೂಡದಂತಾಗುವುದು. ಸಮಯ ವುಂದರಿಸಿದ್ದರೂ ಕೂಡ ಜನರು ಕಳುಹಿಸುವ ಆಕ್ಷೇಪ ಯೂ ತಿದ್ದುಪಡಿಗಳಿಗೆ ಚೀಫ್ ಕವಿಷನರವರು ಲಕ್ಷ್ಯಕೊಡುವರೆಂಬ ಭರವಸೆಯೇನು? ಹಾಗೆ ಅವರು ಲಕ್ಷ್ಯಕೊಡಲು ತಯಾರಾಗಿದ್ದರೆ ಕವಿಟಿಯನ್ನು ನೇವಿಸಲು ಅಧಿಕಾರಿಗಳು ಯಾಕೆ ವಿರೋಧಿಸಬೇಕು? ಆದುದರಿಂದ ಈ ವಿಚಾರದಲ್ಲಿ ಸೈರಿಗೂ ಹಾಗೂ ಸರ್ಕಾರದವರಿಗೂ ಏನಾದರೂ ಪ್ರಯೋಜನ ವುಂಟಾಗಬೇಕಾದರೆ ಕೌನ್ಸಿಲಿನ ತೀರ್ವಾನದಂತೆ ಜನರ ಕೋರಿಕೆಯನ್ನು ನೆರವೇರಿಸಲು ಸರ್ಕಾರದವರು ಹಿಂಜರಿಯಬಾರದು.

ದಿ ಕೆನರಾ ಬ್ಯಾಂಕಿಂಗ್ ಕೋರ್ಪರೇಶನ್ ಉಡುಪಿ, ಲಿವಿಟೆಡ್.

ಇದರ 1935ನೇ ಇಸವಿ ಡಿಸೆಂಬರು 31ಕ್ಕೆ ಅಂತ್ಯವಾದ 30ನೇ ವರ್ಷದ ರಿಪೋರ್ಟು ನಮ್ಮ ಹಸ್ತಗತವಾಗಿದೆ ವರ್ಷಾರಂಭದಲ್ಲಿದ್ದ ಪಾಲು ಭಂಡವಾಳದ ವೊತ್ತ ರೂ 2 25 000 ವರ್ಷಾಂತ್ಯಕ್ಕೆ 2,69,795—0—0 ಏರಿದೆ, ಕ್ಷೇಮನಿಧಿಯೂ ಇತರ ಆಸಧನದ ವೊತ್ತಗಳು ರೂ 2.60,953—7—8 ರಿಂದ ಈಗ ಇನ್ನೊಂದೆಡೆ ಪ್ರಕಟವಾದಂತೆ ರೂ. 3 64 644 ಕ್ಕೆ ಏರಿವೆ. ಹೀಗೆ ಪಾಲು ಭಂಡವಾಳ ಮತ್ತು ಕ್ಷೇಮನಿಧಿಯು ವೊತ್ತಗಳು ಏರಿದ ಸಂಗತಿಯು ಇವರ ಭದ್ರತೆಯ ಅಡಿಗಟ್ಟನ್ನು ವೃಕ್ಕಪಡಿಸುತ್ತದೆ

ತೇವಣಾತಿಗಳು ರೂ. 24 95,329—2—3 ರಿಂದ ಬರೇ ಒಂದು ವರ್ಷದಲ್ಲಿ ರೂ. 27,99,323—5—2ಕ್ಕೆ ಏರಿದ ಸಂಗತಿಯು ಜನರಿಗೆ ಈ ಬ್ಯಾಂಕಿನ ವೇಲಣ ವಿಶ್ವಾಸವನ್ನೂ, ಪ್ರೀತಿಯನ್ನೂ ಸೂಚಿಸುತ್ತದೆ.

ವರದಿಯ ವರ್ಷ ಇನ್ ವೂನಾಫೆ ರೂ 45,785-13-4 ಪಾಲು ವೂಲೀಕರಿಗೆ ಶೇಕಡ 9ರಂತೆ ಲಾಭಾಂಶ ಮತ್ತು ಶೇಕಡ 3ರಂತೆ ಬೋನಸು ಹಂಚಿದೆಯೊಗಿ ತಿಳಿದು ಬರುತ್ತದೆ.

ಕವುಲ ನೆಹರುರವರ ನಿಧನ.

ಲಕ್ನೋ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಪಂಡಿತ ಜವಾಹರ್‌ಲಾಲ್ ನೆಹರುರವರ ಪತ್ನಿ ಶ್ರೀವುತಿ ಕವ.ಲ ನೆಹರುರವರ ಅಕಾಲ ವರಣದ ವಾರ್ತೆಯು ಇಡೀ ಭಾರತ ಭೂವಿಯನ್ನು ದುಃಖ ಸಾಗರದಲ್ಲಿ ವುಳುಗಿಸಿದೆ. ಇವರು ಸಿರಿವಂತರ ಕುಟುಂಬದಲ್ಲಿ ಜನಿಸಿ, ಐಶ್ವರ್ಯವಂತ ವರನನ್ನೇ ವದುವೆಯಾಗಿದ್ದರಿಂದ ಇಚ್ಛಿಸಿದ್ದರೆ ದುಂದುಗಾರಿಕೆಯು ವತ್ತು ಸುಖಮಯವಾದ ಜೀವನವನ್ನು ನಡೆಸಬಹುದಾಗಿತ್ತು. ಆದರೆ ಇವರ ವೂವ ಪಂಡಿತ ವೋತಿಲಾಲ್ ನೆಹರುರವರು ವತ್ತು ಪತಿ ಜವಾಹರ್‌ಲಾಲ್‌ರವರು ತವ್ಮ ಸಿರಿಸಂಪತ್ತುಗಳನ್ನು ತೊರೆದು ದೇಶದ ಸ್ವಾತಂತ್ರ್ಯದ ಹೋರಾಟಕ್ಕೆ ಸೊಂಟಗಟ್ಟಿದಂದಿನಿಂದ ಇವರೂ ಅವರಿಬ್ಬರ ಉದಾಹರಣೆಯನ್ನು ಹಿಂಬಾಲಿಸಿ ದೇಶಕ್ಕಾಗಿ ತುಂಬಾ ತ್ಯಾಗ ವೂಡಿದರು. ವವ ಹಾತ್ಮಾಜೀಯವರು ಹೂಡಿದ ಸತ್ಯಾಗ್ರಹ ಚಳವಳಿದಲ್ಲಿ ಒಬ್ಬ ವುಂದಾಳಾಗಿ ನಿಂತು ಕವುಲ ನೆಹರುರವರು ಜೈಲು ವಾಸವನ್ನೂ ಅನುಭವಿಸಿದರು ಕಾರಾಗೃಹ ವಾಸದ ಕಷ್ಟ ಕಾರ್ಪಣ್ಯಗಳಿಂದ ಇವರ ಆರೋಗ್ಯ ಕೆಟ್ಟು ಕ್ಷಯ ರೋಗಕ್ಕೆ ತುತ್ತಾದರು. ಇಂಡಿಯಾದಲ್ಲಿ ದೀರ್ಘ ಕಾಲ ಕಾಯಿಲೆಯಿಂದ ನರಳಿದ ಇವರು ಚಿಕಿತ್ಸೆಗಾಗಿ ಜರ್ಮನಿಗೆ ತೆರಳಿದರು, ಇವರ ಸ್ಥಿತಿಯು ವಿಷಮಾವಸ್ಥೆಯನ್ನು ವೊಂದುತ್ತಿದ್ದುದರಿಂದ ಇವರ ಪತಿ ಜವಾಹರ್ ಲಾಲರು ಶತ್ರುಗಳೆಂಬೂ ಇಲ್ಲದೆ ಜೈಲಿನಿಂದ ಬಿಡುಗಡೆ ವೂಡಲ್ಪಟ್ಟರು. ಅವರು ಕೂಡಲೇ ತವ್ಮ ಪತ್ನಿಯ ಒಳಿಗೆ ಹೋದರು. ಇತ್ತಲಾಗಿ ಕವುಲರವರ ಕಾಯಿಲೆಯು ನಿಧಾನವಾಗಿ ಗಣವಾಗುತ್ತಿದೆ ಎಂಬ ವಾರ್ತೆಯು ಬರುತ್ತಿತ್ತು. ಈ ವಧ್ಯೆ ಪಂಡಿತ ಜವಾಹರ್‌ಲಾಲರು ಲಕ್ನೋ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅದುದರಿಂದ ಅವರು ಇಂಡಿಯಾಕ್ಕೆ ಹೊರಡುವ ಏರ್ಪಾಡಿನಲ್ಲಿದ್ದರು. ಅಷ್ಟರಲ್ಲೇ ಕವುಲರವರು ಫಕ್ಕನೆ ಕಳೆದ ತಾರೀಕು 28ನೇ ಶುಕ್ರವಾರ ಬೆಳಿಗ್ಗೆ 5 ಗಂಟೆಗೆ ಜರ್ಮನಿಯ ಲಾಸೇನ್ ಚಿಕಿತ್ಸಾಲಯದಲ್ಲಿ ಶಿವಾಧೀನರಾದರು. ಜವಾಹರ್‌ಲಾಲರು ಇವರ ಶರೀರವನ್ನು ಅಲ್ಲಿಯೇ ಚಿತೆಗರ್ಪಿಸಿ, ಭಸ್ಮವನ್ನು ತೆಗೆದುಕೊಂಡು ಈ ತಾರೀಕು 11 ರಲ್ಲಿ ಇಂಡಿಯಾಕ್ಕೆ ಒರಲಿರುವರು. ಕವುಲ ನೆಹರುರವರು ಭಾರತ ಭೂವಿಯ ವೀರ ರವಣಿಯರಲ್ಲಿ ಅಗ್ರಗಣ್ಯರು. ಜೇರೆಯವರಿಗೆ ಉದಾಹರಣ ರೂಪದವರು. ಇವರಿಗೆ ಒಬ್ಬಳೇ ವಗಳಿರುವಳು. ಇವರ ಚಿಕ್ಕ ವಯಸ್ಸಿನ ವರಣದಿಂದ ಹಿಂದೂಸ್ಥಾನಕ್ಕೆ ಅಪಾರವಾದ ನಷ್ಟವಾಗಿದೆ. ಒರುವ ತಿಂಗಳಲ್ಲೇ ಕಾಂಗ್ರೆಸಿನ ವುಂದಾಳತನವನ್ನು ವಹಿಸಲಿಕ್ಕಿರುವ ಇವರ ಪತಿಯವರಿಗೆ ವಿವರಿಸಲಸದಳವಾದ ದುಃಖವೂ, ನಷ್ಟವೂ ಸಂಭವಿಸಿದೆ. ಕವುಲ ನೆಹರುರವರ ಆತ್ಮಕ್ಕೆ ಶಾಂತಿಯನ್ನು, ಜವಾಹರ್‌ಲಾಲರು ವುಂದಿನ ಕೆಲಸಕ್ಕಾಗಿ ಅವರಿಗೆ ಧೈರ್ಯ ಸ್ಥೈರ್ಯಗಳನ್ನೂ, ಅವರ ಸಂಸಾರದವರಿಗೆ ದುಃಖವನ್ನು ಸಹಿಸಲು ಪ್ರಶಕ್ತಿಯನ್ನೂ ಭಗವಂತನು ದಯಪಾಲಿಸಲೆಂದು ಪ್ರಾರ್ಥಿಸುವ.

ಇಂಡಿಯಾ ಸರ್ಕಾರದ ಬಡ್ಜೆಟ್ಟು.

ಉಳಿತಾಯದ ನಿವಿತ್ತ ಕರಗಳ ಸೌಲತ್ತು.

ಇಂಡಿಯಾ ಸರ್ಕಾರದ ಒಡ್ಜೆಟ್ಟಿನಲ್ಲಿ ಈ ವರ್ಷದ ಉಳಿತಾಯದಿಂದ ಈ ಕೆಳಗಿನ ರಿಯಾಯಿತಿಗಳು 1936—37 ನೇ ವರ್ಷ ಕೊಡಲಾಗುವದೆಂದು ಸರ್ ಜೇವ್ಸ್ ಗ್ರೈಗ್‌ರವರು ಎಸೆಂಬ್ಲಿಯಲ್ಲಿ ಹೇಳಿದರು.

1. ಆದಾಯ ತೆರಿಗೆ.

(a) 2000 ರೂಪಾಯಿಗಳಿಗೆ ಕಡಿವೆ ಇರುವ ಆದಾಯಗಳ ವೇಲೆ ಆದಾಯ ತೆರಿಗೆಗಳನ್ನು (ಇನ್‌ಕವ್ ಟೀಕ್ಸ್) ವಿಧಿಸಲಾಗುವದಿಲ್ಲ.

(b) ಅಲ್ಲದೆ ಆದಾಯಗಳ ವೇಲೆ ಹೆಚ್ಚಿನ ಕರ (ಸರ್ ಚಾರ್ಜ್) ಮತ್ತು ಸುಪರ್ ಟ್ಯಾಕ್ಸ್‌ಗಳನ್ನು ಅರ್ಧದ ವಟ್ಟಿಗೆ ಇಳಿಸಲಾಗುವದು.

2 ಪೊಸ್ಟಲ್ ಚಾರ್ಜ್.

ಟಪಾಲು ದಂಗಳಲ್ಲಿ ಪತ್ರಗಳಿಗೆ ಈಗ ½ ತೊಲೆಯ ವರೆಗೆ ವೂತ್ರ 1 ಆಣೆ ಸ್ಟಾಂಪು ಇದ್ದದ್ದನ್ನು ಇನ್ನು 1 ತೊಲೆಯ ವರೆಗೂ 1 ಆಣೆಯಂತೆ ವೂಡಲಾಗುವದು; ಅಲ್ಲದೆ 1 ತೊಲೆಯ ವೇಲ್ಪಟ್ಟು ಪ್ರತಿ ತೊಲೆಗೂ ½ ಆಣೆಯಂತೆ ಸ್ಟಾಂಪು ಹಾಕಬಹುದು.

3. ರಿಸರ್ಚ್ ಕಾರ್ಯಕ್ಕಾಗಿ ಹೆಚ್ಚಿನ ಗ್ರಾಂಟುಗಳು.

1. ವ್ಯವಸಾಯದ ಪರೀಕ್ಷಾ ಕಾರ್ಯಕ್ಕೆ (ಅಗ್ರಿ ಕಲ್ಚರಲ್ ರಿಸರ್ಚ್) ರೂ. 30 ಲಕ್ಷ.

2. ಇಂಡಿಯನ್ ರೀಸರ್ಚ್ ಫಂಡ್ ಎಸೋಸಿಯೇಶನಿಗೆ ರೂ. 10 ಲಕ್ಷ

3. ಗೃಹಗಳಲ್ಲಿನ ಉಂಣೆಯ ಕೈಗಾರಿಕೆಗೆ ರೂ. 5ಲಕ್ಷ.

4 ಬ್ರಾಡ್‌ಕಾಸ್ಟ್ ವೂಡುವ ಕಾರ್ಯಕ್ಕೆ ರೂ 20 ಲಕ್ಷ.

4. ಹಣದ ಅಭಾವವಿರುವ ಪ್ರಾಂತಗಳಿಗೆ ಸಹಾಯ.

ಸಿಂಧ್ ಪ್ರಾಂತ್ಯಕ್ಕೆ ರೂ. 17½ ಲಕ್ಷ ಒರಿಸ್ಸಾ ಪ್ರಾಂತ್ಯಕ್ಕೆ ರೂ. 27½ಲಕ್ಷ ಅಲ್ಲದೆ ಬಾಕಿ ಉಳಿದಿರುವ 207 ಲಕ್ಷ ರೂಪಾಯಿಗಳನ್ನು ರಿವಿನ್ಯೂ ರಿಸರ್ವ್‌ನಲ್ಲಿಟ್ಟು ಪ್ರಾಂತೀಕ ಸರ್ಕಾರ ರಚನೆಯು ಪ್ರಥಮ ವರ್ಷದಲ್ಲಿ ಹಣದ ಕೊರತೆಯುಂಟಾಗುವ ಪ್ರಾಂತ್ಯಗಳಿಗೆ ಧನ ಸಹಾಯ ವೂಡಲು ಇಡಲಾಗುವದು.

ಒಳ ದೇಶ.

ಮಡಿಕೇರಿಯ ಮುನ್ಸೀಫರು ಮಡಿಕೇರಿ ಸಬ್ ಡಿಸ್ಟ್ರಿಕ್ಟಿಗೆ ಸಬ್ ರಿಜಿಸ್ಟ್ರಾರಾಗಿ ನೇಮಿಸಲ್ಪಟ್ಟಿರುವರು.

ಕೊಡಗು ಡಿಸ್ಟ್ರಿಕ್ಟ್ ಬೋರ್ಡಿನ ವಿಂಟಿಂಗೊಂದು ಈ ತಾ. 17ರಲ್ಲಿ ಮಡಿಕೇರಿಯಲ್ಲಿ ನಡೆಯುವುದೆಂದು ತಿಳಿಯುತ್ತೇವೆ.

ಕೊಡಗಿನಲ್ಲಿ ಕಳೆದ ಜನವರಿ ತಿಂಗಳಲ್ಲಿ 285 ಮರಣಗಳೂ, 316 ಜನನಗಳೂ ಸಂಭವಿಸಿದವೆಂದು ಪ್ರಕಟವಾಗಿದೆ.

ಕಳೆದ ತಾ. 29ರಲ್ಲಿ ಬೆಂಗಳೂರಿಗೆ ಹೋಗಿದ್ದ ಕಮಿಷನರವರು ಈ ತಾ. 3ರಲ್ಲಿ ಮಡಿಕೇರಿಗೆ ಹಿಂತಿರುಗಿ ಬಂದಿರುವರು.

ಈ ವಾರ ವೀರಾಜಪೇಟೆಯಲ್ಲಿ ಭತ್ತ ಗಾಡಿಗೆ ರೂ. 40 ಮತ್ತು ಮಡಿಕೇರಿಯಲ್ಲಿ ಕಾಫಿ ಖಾಡಿಗೆ ರೂ. 128 ಕ್ಕೆ ಯವಿತ್ತೆಂದು ತಿಳಿಯಬರುತ್ತದೆ.

ಕೌನ್ಸಿಲ್ ವಿಂಟಿಂಗಿಗಾಗಿ ಮಡಿಕೇರಿಗೆ ಬಂದಿದ್ದ ಚೀಫ್ ಕಮಿಷನರವರು ಈ ತಾ 1ರಲ್ಲಿ ಮಡಿಕೇರಿಯಿಂದ ಬೆಂಗಳೂರಿಗೆ ವಾಪಸು ಹೋದರು.

ಮರೆನಾಡಿನಲ್ಲಿ ಬರುವ ಏಪ್ರಿಲ್ ತಿಂಗಳು 5ರಲ್ಲಿ ದನಗಳ, ವ್ಯವಸಾಯ ಮತ್ತು ಕೈಗಾರಿಕೆ ಸಾಮಾನುಗಳ ಪ್ರದರ್ಶನವೊಂದು ನಡೆಯುವದೆಂದು ತಿಳಿಯಬರುತ್ತದೆ.

ಕೊಡವಂಡ ಅಪ್ಪಯ್ಯ ವಿದ್ಯಾ ಎಡೋಮೆಂಟ್ ಫಂಡಿಗೆ ಮೆ. ಕೊಡವಂಡ ಮುತ್ತಣ್ಣನವರು ಒಟ್ಟು ಕವಿಟಿ ಮೊಂಬತ್ತಾಗಿ ಕಮಿಷನರವರಿಂದ ನೇಮಿಸಲ್ಪಟ್ಟಿರುವರು.

ಆದಿ ಶ್ರೀ ಕಾವೇರಿ ಬಸ್ಸು ಸರ್ವಿಸಿನವರು ಉತ್ಪತ್ತಿಯನ್ನು ವಿಭಾಗಿಸಿಕೊಳ್ಳುವ ಮಟ್ಟಿಗೆ ಸಿ. ಪಿ ಸಿ. ಬಸ್ ಸರ್ವಿಸಿನವರೊಡನೆ ಜೊತೆ ಸೇರಿರುವರೆಂದು ತಿಳಿಯಬರುತ್ತದೆ.

ಗೋಣಿಕೊಪ್ಪಲಿನ ಎಡಮ ಮತ್ತು ತಿತಿಮತಿಯ ಒಂದು ಸಾರಾಯಿ ಅಂಗಡಿಗಳ ಪರಾಮರ್ಶ. ಪುನಹ ಈ ತಾ. 22ರಲ್ಲಿ ಗೋಣಿಕೊಪ್ಪಲ್ಲಿ ನಡೆಸಲ್ಪಡುವದೆಂದು ತಿಳಿಯಬರುತ್ತದೆ.

ಮಡಿಕೇರಿ ಮುನ್ಸೀಫ್ ಕೋರ್ಟು ಈ ತಾ. 2ರಲ್ಲಿ ಹೊಸದಾಗಿ ತೆರೆಯಲ್ಪಟ್ಟಿತು. ಮೆ. ಪುಚ್ಚಿಮಂಡ ನಾಣಯ್ಯನವರು ಆ ದಿನ ಮುನ್ಸೀಫ್ ಹುದ್ದೆಯ ಚಾರ್ಜನ್ನು ವಹಿಸಿಕೊಂಡರು.

ಶನಿವಾರಸಂತೆ ಹೋಬಳಿಯ ಸಹಕಾರಿ ಪರಿಷತ್ತು ಈ ತಾ 3ರಲ್ಲಿ ಸಹಕಾರಿ ಸಂಘಗಳ ರಿಜಿಸ್ಟ್ರಾರವರ ಅಧ್ಯಕ್ಷತೆಯಲ್ಲಿ ಗುಡುಗಳಲೆಲೆ ಜಯದೇವ ಬಾಣೆಯಲ್ಲಿ ಜಯಪ್ರದವಾಗಿ ನಡೆಯಿತು.

ಕಣ್ಣನ್ನೂರಿನ ಕ್ರಿಕೆಟ್ ಟೀಮೊಂದು ಮಡಿಕೇರಿಗೆ ಬಂದು ಈ ತಾ. 1ರಲ್ಲಿ ಇಲ್ಲಿಯ ಕೊಡಗು ಕ್ರಿಕೆಟ್ ಕ್ಲಬ್ಬಿನವರೊಡನೆ ಕ್ರಿಕೆಟ್ ಆಟವನ್ನೂ, ಸೆಂಟ್ರಲ್ ಹೈಸ್ಕೂಲಿನವರೊಡನೆ ಹಾಕಿ ಆಟವನ್ನೂ ಆಡಿ, ಎರಡು ಆಟಗಳಲ್ಲಿಯೂ ಗೆದ್ದರೆಂದು ತಿಳಿಯುತ್ತೇವೆ

ಸರ್ಕಾರದವರುಗಳು ಕೊಡಗಿನ ದೋಣಿ ಕಡವುಗಳ ಹರಾಜನ್ನು ಬರುವ ಏಪ್ರಿಲ್ ತಾ. 24ರಲ್ಲಿ ಮಡಿಕೇರಿಯಲ್ಲಿಯೂ, ತಾ. 27ರಲ್ಲಿ ಸೋಮವಾರಪೇಟೆಯಲ್ಲಿಯೂ, ತಾ. 28ರಲ್ಲಿ ಫ್ರೇಜರ್‌ಪೇಟೆಯಲ್ಲಿಯೂ ತಾ. 29ರಲ್ಲಿ ವೀರಾಜಪೇಟೆಯಲ್ಲಿಯೂ ನಡಿಸುವರೆಂದು ಗಜೆಟಿನಲ್ಲಿ ಪ್ರಕಟವಾಗಿದೆ.

ಕಮಿಷನರಾಗಿರುವ ಮೆ ಜ. ಯಸ್. ಬಾಸ್‌ಸ್ಯೂನ್ ಐ. ಸಿ. ಯಸ್. ರವರು ಈ ತಾ. 25ರಲ್ಲಿ ಕೊಡಗಿನಿಂದ ಹೋಗುವರೆಂದೂ, ಅವರ ಬದಲಿಗೆ ಕಮಿಷನರಾಗಿ ಮೆ. ಐ. ಯಂ. ಫ್ರೇಜರ್ ಐ. ಸಿ ಯಸ್. ರವರು ಈ ತಾ. 22ರಲ್ಲಿ ಮಡಿಕೇರಿಗೆ ಬರುವರೆಂದೂ ವರ್ತಮಾನ.

ರೆಡ್‌ಕ್ರಾಸ್ ಸಂಘದ ಕೊಡಗು ಶಾಖೆಯ ಶಿಶು ಪ್ರದರ್ಶನವು ಕಳೆದ ತಾ. 29 ಮತ್ತು ತಾ. 1ರಲ್ಲಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ನಡೆಯಿತು. ಮೆ. ನಿಕಲ್ಸ್‌ರವರು ಪ್ರದರ್ಶನವನ್ನು ತೆರೆದರು. ಮಿಸೆಸ್ ಮೂಲೆಂಡ್‌ರವರು ಬಹುಮಾನಗಳನ್ನು ಹಂಚಿದರು.

ಕಳೆದ ನವಂಬರಿನಿಂದ ಫೆಬ್ರವರಿ ಅಂತ್ಯದ ವರೆಗೆ ಮಡಿಕೇರಿ ಕೋರ್ಟು ಕಚ್ಚೇರಿಗಳನ್ನು ಬೆಳಿಗ್ಗೆ 10 ಗಂಟೆಯಿಂದ ಸಾಯಂಕಾಲ 4 ಗಂಟೆ ವರೆಗೆ ನಡಿಸುತ್ತಿದ್ದದನ್ನು ಬದಲಾಯಿಸಿ, ಈ ತಾ. 1ರಿಂದ ಎಂದಿನಂತೆ ಬೆಳಿಗ್ಗೆ 11 ಗಂಟೆಯಿಂದ ಸಾಯಂಕಾಲ 5 ಗಂಟೆ ವರೆಗೆ ನಡಿಸುತ್ತಿರುವರು

ಕೊಡಗು ಕರ್ನಾಟಕ ಸಂಘವು ಆಶ್ರಯದಲ್ಲಿ ಮೈಸೂರಿನ ಸುಪ್ರಸಿದ್ಧ ಭಾರತ ಪಠನಕಾರರಾದ ಮೆ. ಕೆ. ಕೃಷ್ಣರಾಯರು ಸೆಂಟ್ರಲ್ ಹೈಸ್ಕೂಲ್ ಹಾಲ್‌ನಲ್ಲಿ ಈ ತಾ. 7ರ ಸಾಯಂಕಾಲ 'ಅಕ್ಷಯ ವಾತ್ಸಲ್ಯಮಹಿಮೆ' ಮತ್ತು ತಾ. 8ರ ಸಾಯಂಕಾಲ 'ಶ್ರೀಕೃಷ್ಣ ಸಂಧಾನ' ಭಾರತ ವಾಚನ ಮಾಡುವರು

ಕೊಯಮುತ್ತೂರು ಫಾರೆಸ್ಟು ಕಾಲೇಜಿನಲ್ಲಿ ರೇಂಜರ್ ತರಬೇತು ಹೊಂದುತ್ತಿರುವ ಮೆ. ಚಿಂಡಾವಾಡ ವೆಂಕಣ್ಣಪ್ಪನವರು ತಾ. 29—2—'36ರಲ್ಲಿ ನಡೆದ ಕಾಲೇಜು ಅಟೋಟದಲ್ಲಿ 7½ ಮೈಲು ದೂರದ 'ಮೆರತನ್' ಓಟದಲ್ಲಿ ಒಂದನೇಯದಾಗಿ ಒಂದು ಇನಾಮಿನ ಪದಕವನ್ನು ಪಡೆದುದಲ್ಲದೆ ಹಿಂದಿನ 'ರೆಕಾರ್ಡ್'ನ್ನು ಮೀರಿರುವರೆಂದು ಕೇಳಿ ಸಂತೋಷಪಡುತ್ತೇವೆ.

ಹಿಂದೂ ದೇಶ.

ನೆಹಲಿಯ ನಗರ ಸಭೆಯವರು ಸದ್ಯದಲ್ಲಿ ನಿವೃತ್ತರಾಗುವ ಮತ್ತು ಹೊಸ ವೈಸರಾಯರುಗಳಿಗೆ ಮಾನಪತ್ರ ಸಮರ್ಪಿಸುವುದಾಗಿ ನಿರ್ಧರಿಸಿದ್ದಾರೆ.

ಖಗೋಳ ಶಾಸ್ತ್ರಜ್ಞರು ಅತ್ಯಂತ ಸಣ್ಣ ನಕ್ಷತ್ರವನ್ನು ಹುಡುಕಿಟ್ಟಿದ್ದಾರೆ. ಅದು ನಾವಿರುವ ಭೂಮಿಗೆ ಬಹಳ ಹತ್ತಿರವಿದೆ. 4000 ಮೈಲಿ ದೂರ. ಅದರ ಪ್ರತಿ ಘನ ಅಡಿಯೊಂದಕ್ಕೆ 620 ಟನ್ನು ತೂಕವಿದೆಯಂತೆ.

ಅಲ್ಲಿಯ ಗುರುತ್ವಾಕರ್ಷಣವು ಭೂಮಿಯದಕ್ಕಿಂತ ನಾನೂರು ಸಾವಿರದಷ್ಟಿದೆ. ಅಂದರೆ ಭೂಮಿಯ ಮೇಲೆ 1 ಪೌಂಡು ತೂಗುವ ವಸ್ತುವು ಆ ನಕ್ಷತ್ರದಲ್ಲಿ 400,000 ಪೌಂಡು ತೂಗುತ್ತದೆ.

ಬೊಂಬಾಯಿಂದ ಪ್ರಕಟವಾಗುತ್ತಿದ್ದ 'ಸ್ವರಾಜ್ಯ' ಎಂಬ ಮರಾಠಿ ದಿನ ಪತ್ರಿಕೆಗೆ ಬೊಂಬಾಯಿ ಸರಕಾರದವರು ರೂ. 2000 ಸೆಕ್ಯೂರಿಟಿ ಹಣವನ್ನು ಕೇಳಿದ್ದಾರೆ.

ತಾ. 25ನೇ ಬೆಳಿಗ್ಗೆ ಕ್ವೆಟ್ಟದಲ್ಲಿ ಭೂಮಿಯು ಸುಮಾರು ಐದು ಕ್ಷಣಗಳ ವರೆಗೆ ಗುಡುಗಿನಂತಹ ಶಬ್ದದೊಡನೆ ಕಂಪಿಸಿತು. ಆದರೆ ಪ್ರಾಣಹಾನಿಯೇನೂ ಆಗಿಲ್ಲ.

1936ನೇ ಇಸವಿಯ ಗವುರಿಶಂಕರ ಶಿಖರವನ್ನೇರುವ ಪಂಗಡದವರು ಮುಖ್ಯಾಡಳಿತಾಧಿಕಾರಿ ಮಿ ಹ್ಯೂಗರಟ್ಟಿಜ್ ರವರು ತಮ್ಮ ಸಂಗಾತಿಯೊಡನೆ ಡಾರ್ಜಿಲಿಂಗಿಗೆ ತಾರೀಕು 25ರಲ್ಲಿ ಕಲ್ಕತ್ತದಿಂದ ಹೊರಟರು.

ಕಳೆದ ಜನವರಿ ತಿಂಗಳ ಅಂತ್ಯದೊಳಗೆ ಹಿಂದೂಸ್ಥಾನದಲ್ಲಿ 120 ಮಂದಿ ಮುಸಲ್ಮಾನರನ್ನೂ, 60 ಮಂದಿ ಕ್ರೈಸ್ತರನ್ನೂ ಆರ್ಯ ಧರ್ಮದವರು ಶುದ್ಧಿಗೊಳಿಸಿ ಹಿಂದೂ ಧರ್ಮಕ್ಕೆ ಸೇರಿಸಿದರು.

ಮಿ. ಲೈತ್‌ವೈಟರು ಲಾರ್ಡ್ ಲಿನ್‌ಲಿತ್‌ಗೌರವಂಗೆ ಪ್ರೈವೇಟ್ ಸೆಕ್ರೆಟರಿಗಳಾಗಿ ನೇಮಕ ಹೊಂದಿರುವರು. ಈ ಪದವಿಯು ದೆಹಲಿಯ ರಾಜಕೀಯ ಮುಖಂಡರಲ್ಲಿ ಸಂತೋಷವನ್ನುಂಟುಮಾಡಿರುವುದು.

ಚಿತ್ರಕಲೆಯಲ್ಲಿ ತುಂಬಾ ನೈಪುಣ್ಯವನ್ನು ಪಡೆದ ಲಾಹೋರಿನ ಮಹಿಳೆ ಮಿಸ್ ಓಲ್ಡ್‌ಫೀಲ್ಡ್ ಎಂಬ ಯುವತಿಯು ಆರ್ಯ ಧರ್ಮವನ್ನು ಸ್ವೀಕರಿಸಿದಳು. ಅವಳ ಹಿಂದೂ ಹೆಸರು ಶ್ರೀಮತಿ ಇಂಡುಮತಿ ದೇವಿ

ಬಾರ್ದೋಲಿ ಸತ್ಯಾಗ್ರಹದ ಫಲವಾಗಿ ತಮ್ಮ ಸರ್ವಸ್ವವನ್ನೂ ಕಳೆದುಕೊಂಡ ಸುಮಾರು ಮೂವತ್ತು ಕುಟುಂಬಗಳು ಬ್ರಿಟಿಷ್ ರಾಜ್ಯವನ್ನು ಬಿಟ್ಟು ಸುಮಾರು ಮೂವತ್ತು ಮೈಲು ದೂರವಿರುವ ಬಾನ್ಸ್‌ದ ಸಂಸ್ಥಾನಕ್ಕೆ ಹೊರಟಿವೆ.

ಮೆ. ಜಿನ್ನಾರವರ ಪ್ರಯತ್ನದಿಂದ ಲಾಹೋರಿನ ಮುಸಲ್ಮಾನರು ತಮ್ಮ ಶಾಸನಭಂಗ ಚಳವಳಿಯನ್ನು ನಿಲ್ಲಿಸಿದ್ದಾರೆ. ಸರಕಾರಿಂದವರೂ ಈ ಸಂಬಂಧವಾದ ಕೈದಿಗಳನ್ನು ಬಿಡಲೂ, ಮುಟ್ಟುಗೋಲಾದ ಸೆಕ್ಯೂರಿಟಿಗಳನ್ನು ಹಿಂದಿರುಗಿಸಲೂ ಒಪ್ಪಿದ್ದಾರೆ.

ಕವಿ ರವೀಂದ್ರರು ಗಾಯಕರ ಮತ್ತು ನೃತ್ಯಕರ ಗುಂಪಿನೊಡನೆ ಕಲ್ಕತ್ತ, ಪಾಟ್ನ, ದೆಹಲಿ, ಅಲಹಾಬಾದ್, ಅಹಮದಾಬಾದ್, ಬೊಂಬಾಯಿ, ನಾಗಪುರಗಳನ್ನು ಸಂಚರಿಸಿ ಕಚೇರಿಗಳನ್ನು ನಡೆಸುವರು. ಆಲ್ಲೆಲ್ಲ ರವೀಂದ್ರರ 'ಚಿತ್ರ' ನಾಟಕವು ಅಭಿನಯಿಸಲ್ಪಡುವುದು.

ಮಂಗಳೂರಿನ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ. ಜಿ. ಕೆ. ಚೆಬ್ಬರರವರು ಮದ್ರಾಸಿನಲ್ಲಿ ದಿವಂಗತರಾದರು. ಇವರ ಬದಲಿಗೆ ಅನಂತಪುರ ಕಾಲೇಜಿನ ಪ್ರಿನ್ಸಿಪಾಲರಾದ ಮಿ. ನಾರಾಯಣ ಗಾಂಡಗಾರೂ, ಬಿ ಎಚ್. ಸಿ (ಆಕ್ಸ್‌ಫರ್ಡ್) ಇವರು ಸದ್ಯದಲ್ಲೇ ಬರಲಿರುವರು.

ಪೊಲೀಸ್ ಇಲಾಖೆಯಲ್ಲಿ ಲಂಚ ಉಪಸ್ಪರ್ಶವಿದೆಯೆಂದು ಸರ್ ಹೆನ್ರಿ ಕೈಟ್ ಸಾಹೇಬರು ಎಸೆಂಬ್ಲಿಯಲ್ಲಿ ಡಾ. ಭಗವಾನ್ ದಾಸರ ಪ್ರಶ್ನೆಗೆ ಉತ್ತರ ಕೊಟ್ಟರು ಆವರ ಉಪದ್ಯಾನವನ್ನು ಸರ್ಕಾರದವರು ಸಂಪೂರ್ಣ ನಾಶ ಮಾಡಲು ತಪವರ್ತರಾದರೂ, ಅದು ನಾಶವಾಗದೇಕಾದರೆ ಜನರು ಸಹಕಾರ ಸಬೇಕೆಂದೂ ತಿಳಿಸಿದರು

ನಮ್ಮ ಈಗಿನ ವೈಸರಾಯರಾದ ಲಾರ್ಡ್ ವಿಲ್ಲಿಂಗ್‌ಡನ್‌ರವರು ಏಪ್ರಿಲ್ ತಾ, 18 ಕ್ಕೆ ಬೊಂಬಾಯಿಯನ್ನು ಬಿಟ್ಟು ಸ್ವದೇಶಕ್ಕೆ ತೆರಳುವರು. ಹೊಸ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರು ಏಪ್ರಿಲ್ ತಾ 17 ಕ್ಕೆ ಬೊಂಬಯಿ ಬಿಟ್ಟು, 18 ಕ್ಕೆ ದಿಲ್ಲಿಗೆ ದಯೆನೂಡಿಸಿ, ಅಂದೇ ವೈಸರಾಯರ ಗದ್ದಿಗೆಯನ್ನೇರುವರು.

ಕಳೆದ ಡಿಸೆಂಬರ್ ತಾ. 1ರಲ್ಲಿ ಕರ್ತಾರ್ ಸಿಂಗ್‌ನೆಂಬ ಸಿಕ್ಖ್ ಯುವಕನೊಬ್ಬನು ಮತ್ತೊಬ್ಬ ಸಿಕ್ಖನೊಡನೆ ಷಾಹಿದ್ ಗಂಜ್ ಗುರುದ್ವಾರದ ಕಡೆಗೆ ಹೋಗುತ್ತಿದ್ದಾಗ ಹಸನ್ ದಿನ್ ಎಂಬ ಮುಸಲ್ಮಾನ ಯುವಕನೋರ್ವನು ಕೊಡಲಿಯಿಂದ ಕಡಿದು ಕೊಂದನು. ಇದರ ವಿಚಾರಣೆಯಾಗಿ ಕೊಲೆಪಾತಕಿಗೆ ಮರಣದಂಡನೆ ವಿಧಿಸಿರುವರು.

ಮಹಾತ್ಮ ಗಾಂಧಿಯವರು ಮಾರ್ಚ್ 15 ನೇ ತಾರೀಕಿಗೆ ಲಖನೌದಲ್ಲಿ ಅಖಿಲ ಭಾರದ ಖಾದಿ ಮತ್ತು ಗ್ರಾಮೋದ್ಯಮಗಳ ಪ್ರದರ್ಶನವನ್ನು ಅನಾವರಣ ಮಾಡುವರು. ಹಾಗೆಯೇ ಸಂಯುಕ್ತ ಪ್ರಾಂತ್ಯದಲ್ಲಿ ಖಾದಿಯ ಮೂರಾಟವನ್ನು ಹೆಚ್ಚಿಸಲು ಎರಡು ವಾರದ ವರೆಗೆ ಪಂಡಿತ ಜವಹರಲಾಲ್‌ರ ಸಂಗಡ ಸಂಚಾರ ಮಾಡುವರೆಂದೂ ತಿಳಿಯಲಾಗಿದೆ.

ಪಂಡಿತ ಜವಹರಲಾಲರ ಪತ್ನಿಯವರಾದ ಶ್ರೀಮತಿ ಕಮಲಾನೆಹರೂಯವರು ಕಳೆದ ತಾ 28 ರಲ್ಲಿ ದೈವಾಧೀನರಾದರು ಈಕೆ ಕಾಂಗ್ರೆಸಿನ ವ್ಯಕ್ತ ಸೇವಕಿಯರಾಗಿದ್ದು ಅಸಹಕಾರ ಕಾಲದಲ್ಲಿ ಕಾರಾಗೃಹವಾಸವನ್ನೂ ಅನುಭವಿಸಿದ್ದರು. ಈಕೆಯ ಹೆಸರು ಭಾರತದಲ್ಲೆಲ್ಲ ಮನೆಯ ಮಾತಾಗಿರುವುದು ರಿಂದಲೆ ಈಕೆಗೆ ಎಲ್ಲ ಕಡೆಗಳಲ್ಲಿಯೂ ಅಸದೃಶವಾದ ಗುಣಗಾನದ ಗೌರವವು ದೊರಕಿದೆ. ಈ ಅಕಾಲ ನಿಧನದ ಸಂಬಂಧ ಎಲ್ಲ ಕಡೆಗಳಲ್ಲಿಯೂ ಸಂತಾಪ ಸೂಚನೆಯ ಮಹಾ ಸಭೆಗಳು ಜರುಗಿವೆ.

ಮದರಾಸಿನ ವಿವಾಹಿತಳಾಗಿದ್ದ ರಂಗನಾಯಕಿ ಎಂಬ ಯುವತಿಯನ್ನು ಆರ್. ಎನ್. ಕಾಪೂರ್ ಎಂಬವರು ವಿವಾಹದಲ್ಲಿ ಕುಳ್ಳಿರಿಸಿಕೊಂಡು ಬೊಂಬಾಯಿಗೆ ಪಲಾಯನ ಮಾಡಿದರಷ್ಟೆ. ಆ ವ್ಯವಹರಣೆಯು ಬಹು ಕಾಲವ ವರೆಗೆ ವಿಚಾರಣೆಯಾಗಿ ಕಳೆದ ತಾ. 25ರಲ್ಲಿ ಅದರ ತೀರ್ಪು ಕೊಡಲ್ಪಟ್ಟಿತು. ಆಪಾದಿತರಿಗೆ ಮದುವೆಯಾದವಳನ್ನು ತಡೆದು ನಿಲ್ಲಿಸಿ ಅವಳನ್ನು ಕೆಡಿಸಿರುವರೆಂಬ ಅಭಿಪ್ರಾಯವನ್ನು ಅನುಮೋದಿಸಿ ಅವರಿಗೆ ಪ್ರತಿಯೊಂದು ಅಪರಾಧದ ಮೇಲೆ ಮೂರು ತಿಂಗಳ ಕಠಿಣ ಸಜೆಯನ್ನೂ 500 ರೂ. ಗಳ ಜುಲುಮಾನೆಯನ್ನೂ ಇದನ್ನು ಕೊಡದಿದ್ದಲ್ಲಿ ಪುನಃ ಎರಡು ತಿಂಗಳ ಸಜೆಯನ್ನೂ ವಿಧಿಸಿದರು. ನೇಜಿಸ್ಟ್ರೇಟರು ತಮ್ಮ ತೀರ್ಪನ್ನು ಓದುವುದಕ್ಕೆ 3 ಗಂಟೆಗಳ ಕಾಲ ತೆಗೆದುಕೊಂಡರು. ಈ ತೀರ್ಪಿನ ಮೇಲೆ ಕಪೂರರು ಅಪೀಲು ಮಾಡ ಬವರಾಗಿದ್ದಾರೆ. 1000 ರೂ. ಗಳ ಜಾಮೀನಿನ ಮತ್ತು ಅಷ್ಟೇ ಮೌಲ್ಯಕ್ಕೆ ಇನ್ನಿಬ್ಬರ ಜಾಮೀನಿನ ಮೇಲೆ ಕಪೂರರ ಬಿಡುಗಡೆಯಾಗಿದೆ.

ಸ್ವಾಮಿ ವಿವೇಕಾನಂದ ವಿದ್ಯಾಲಂಕಾರ ಎಂಬ ಸಾಧುಗಳು ಅಹವದಾಬಾದಿನಲ್ಲಿ ಕೆಲವು ಅತ್ಯಾಶ್ಚರ್ಯವಾದ ಯೋಗದ ಹಟಸಾಧನೆಗಳನ್ನು ಪ್ರದರ್ಶಿಸಿದರು. ನೆಲದಲ್ಲಿ ದೊಡ್ಡ ಹೊಂಡ ತೆಗೆದು ಅದರೊಳಗೆ ಕೂತುಕೊಂಡು ಅಲ್ಲಿಗೆ ಗಾಳಿ ಹೋಗದಂತೆ ಮುಚ್ಚಿ 24 ತಾಸುಗಳ ವರೆಗೆ ಕಾವಲಿಟ್ಟಿದ್ದರು. ಆ ಮೇಲೆ ಸಾಧುಗಳು ಮೇಲೆದ್ದು ಬಂದು ವೈದ್ಯ ಪರೀಕ್ಷೆಯಾದಾಗ ಯಾವ ತರದ ನ್ಯೂನತೆಯೂ ಕಂಡು ಬರಲಿಲ್ಲ. ಹಾಗೆಯೇ ಪ್ರಸಿದ್ಧ ವೈದ್ಯರ ಸಮಕ್ಷದಲ್ಲಿ ಹೃತ್ಕ್ರಿಯೆಯನ್ನು ನಿಲ್ಲಿಸಿ ತಮ್ಮ ಅದ್ಭುತ ಸಾಧನೆಯನ್ನು ಪ್ರದರ್ಶಿಸಿದರು. ದೂರ ನಿಂತು ಬಾಣದಿಂದ ಹೂವಾಲೆಯನ್ನು ಪ್ಯೇಕ್ಷಕರೊಬ್ಬರ ಕೊರಳಿಗೆ ಹಾಕುವ ಪ್ರಯೋಗವೊಂದೂ ಇತ್ತು.

ಸಿಂಧ್ ದೇಶದಲ್ಲಿ ಪ್ರಾಂತ್ಯ ರಾಜನಾಕಾರ್ಯಗಳು ಭುಗಿಲಿಂದ ನಡೆಯುತ್ತವೆ. ಈ ಪ್ರಾಂತ್ಯಕ್ಕೆ ನೇಮಕವಾದ ಗವರ್ನರರು ಸರ್ ಲೆನ್ಸಲೋಟ್ ಗ್ರಿಹೇಮರು ಬರುವ ಮಾರ್ಚ್ ತಿಂಗಳ ಒಳಗಾಗಿ ಮುಂಬಾಯಿಯಲ್ಲಿ ಇಳಿಯುವರು. ನಂತರ ಈ ಪ್ರಾಂತ್ಯದ ಸರಕಾರ ರಾಜನಾಕಾರ್ಯವು ನಡೆಯುವುದು. ಗವರ್ನರರ ವಿಲಿಟರಿ ಸೆಕ್ರೆಟರಿಯವರು ಮಾರ್ಚ್ ಪ್ರಥಮ ಅರ್ಧದಲ್ಲಿ ಬರುವರು. ಇಲ್ಲಿಯ ಸೆಕ್ರೆಟೇರಿಯೇಟಿಗೆ 92 ಮಂದಿ ಗುಮಾಸ್ತರ ಕೆಲಸಕ್ಕೆ 3000 ಅಜಿ ಗಳು ಬಂದಿವೆ. ಗವರ್ನರರಿಗೆ ಉಳಕೊಳ್ಳಲು 3,50,000 ರೂ. ವೆಚ್ಚ ಮಾಡಿ ಒಂದು ಸಿಲಯವನ್ನೂ, ರೂ. 50 000 ವೆಚ್ಚ ಮಾಡಿ ಅದಕ್ಕೆ ಸೊತ್ತನ್ನೂ ತಯಾರಿಸುವರಂತೆ.

ಮುಂಬಾಯಿ ಸರಕಾರದಲ್ಲಿ ರೂ 40,000 ಉಳಿತಾಯವಾಗಿದೆಯೆಂದೂ, ಮಧ್ಯ ಪ್ರಾಂತ್ಯಗಳ ಬಡ್ಜೆಟ್ಟಿನಲ್ಲಿ ರೂ. 8 ಲಕ್ಷ ನಷ್ಟವಾಗುವುದೆಂದೂ, ಬಂಗಾಳ ಸರಕಾರದ ಬಡ್ಜೆಟ್ಟಿನಲ್ಲಿ ರೂ. 51,75,000 ನಷ್ಟವಾಗುವುದೆಂದೂ (ಇವನ್ನು ಗತ ವರ್ಷದಲ್ಲಿ ಉಳಿದ ಮೊಬಲಗಿನಿಂದಲೂ, ಇಂಡಿಯಾ ಸರಕಾರದೊಡನೆ ಓವರ್ ಪೇಪ್ಪಿನಿಂದಲೂ ಭರ್ತಿಮಾಡುವರೆಂದೂ) ಸಂಯುಕ್ತ ಪ್ರಾಂತ್ಯದ ಬಡ್ಜೆಟ್ಟಿನಲ್ಲಿ ರೂ. 77,70,000 ನಷ್ಟವಾಗಿರುತ್ತದೆಂದೂ, (ಇವನ್ನು 77 ಲಕ್ಷದ ಜಾಮು ಸಾಲದಿಂದ ಭರ್ತಿಮಾಡುವಂತಾಗಿಯೂ) ತಿಳಿದುಬರುತ್ತದೆ. ಮದ್ರಾಸು ಸರಕಾರಕ್ಕೆ ಈ ಭಾರಿ ನಷ್ಟವಾಗಬಹುದೆಂದೂ ತಿಳಿದುಬರುತ್ತದೆ.

ಬಂಗಾಳದ ಕಾಂಗ್ರೆಸ್ ವಿವಾದವು ಶ್ರೀ. ಜವಾಹರಲಾಲರಿಂದ ಕೊನೆಗೊಳಿಸಲ್ಪಡುವುದೆಂದು ದೇಶದಲ್ಲೆಲ್ಲಾ ಊಹೆ. ಶ್ರೀ. ನೆಹರುಗಳವರು ಶ್ರೀ. ಸುಭಾಶ್ಚಂದ್ರಭೋಸರನ್ನು ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಗಳವರಾಗಿ ಮಾಡಿ, ಈ ಕಾರ್ಯವನ್ನು ನಡೆಯಿಸುವರಂತೆ. ಬಂಗಾಳದ ಭೇದವಿಚ್ಛೇದಗಳನ್ನು ಸಾಶಮಾಡಲು ಶ್ರೀ. ನೆಹರೂರವರಲ್ಲಿ ಒಳ್ಳೇ ಯೋಗ್ಯತೆಗಳಿವೆಯೆಂದು ಅನೇಕರ ಅಭಿಪ್ರಾಯ. ಅತೂ ಇಂತೂ, ಲಕ್ನೋ ಕಾಂಗ್ರೆಸ್ಸಿನಲ್ಲಿ ಬಂಗಾಳದ ಕಲಹ ನಿವಾರಣೆಯಾಗುವುದು.

ವಿದೇಶ.

ದಿವಂಗತ ಕಿಂಗ್ ಜಾರ್ಜರ ನಿಧನದ ಖರ್ಚಿಗಾಗಿ 25 ಸಾವಿರ ಪವನು ಈ ಸಲದ ಬ್ರಿಟನ್ನಿನ ಬಡ್ಜೆಟ್ಟಿನಲ್ಲಿ ಸೇರಿಸಲಾಗಿದೆ. ನಿಧನ ವೇಳೆಗೆ ಬಂದ ಅತಿಥಿಗಳನ್ನು ಸತ್ಕರಿಸುವುದಕ್ಕೆ 7 ಸಾವಿರ ಪವನು ವೆಚ್ಚವಾಯಿತಂತೆ.

ಕಳೆದ ಜಪಾನು ದಂಗೆಯಲ್ಲಿ ಪ್ರಧಾನ ಮಂತ್ರಿಗಳಾದ ಓಕಾಡರವರು ಕೊಲೆಯಾಗಿರುವದಿಲ್ಲವೆಂದೂ, ಅವರು ಇನ್ನೂ ಪ್ರಧಾನ ಮಂತ್ರಿಗಳಾಗಿಯೇ ಇರುವರೆಂದೂ ತಿಳಿಯಲಾಗಿದೆ. ದಂಗೆಕಾರರು ಇನ್ನೂ ಸರ್ಕಾರವನರ ಹಿಡಿತಕ್ಕೆ ಬಂದಿರುವುದಿಲ್ಲ.

ಮೆಲ್ಬೋರ್ನ್ (ಆಸ್ಟ್ರೇಲಿಯಾ) ನಗರದ ಕ್ರಿಕೆಟ್ ಆಡುವ ಮೈದಾನಿನ ದುರಸ್ತಿನ ಬಗ್ಗೆ ಒಂದು ಲಕ್ಷ ಪವನುಗಳನ್ನು ಖರ್ಚು ಮಾಡುವರು. ಸುಮಾರು ಒಂದು ಲಕ್ಷ ಪ್ರೇಕ್ಷಕರಿಗೆ ಕುಳಿತುಕೊಳ್ಳುವಷ್ಟು ಸೌಕರ್ಯವನ್ನು ಒದಗಿಸುವರು.

ಇಟಲಿ ಅಬಿಸೀನಿಯ ಯುದ್ಧದ ಪರಿಣಾಮವಾಗಿ ಇಂಗ್ಲೆಂಡು ತನ್ನ ಆಫ್ರಿಕದ ಕಾಲೊನಿಗಳನ್ನು ಭದ್ರವಾಗಿಡಲು ಈ ವರ್ಷದ ಆಯುವ್ಯಯದ ಪಟ್ಟಿಯಲ್ಲಿ ಹೊಸ ಖರ್ಚಿನ ಲೆಕ್ಕ ವೊಂದನ್ನು ತೋರಿಸಿದೆ. ಈ ಖರ್ಚೆಲ್ಲವೂ ಆಯಾ ಕಾಲೊನಿಯ ಸೈನ್ಯಾಭಿವೃದ್ಧಿಗಾಗಿಯೇ. ಬ್ರಿಟಿಷ್ ಸೊಮಲೀಲೆಂಡ್ 23,000 ಪವುಸು, ಕೆನಿಯ 14000 ಮೊಲ್ಟಾದ್ವೀಪ 93000, ಏಡನ್ 8000. ಇಂಡಿಯ ಸರಕಾರವು ಸಹ ಏಡನ್ ಭದ್ರತೆಗಾಗಿ 4000 ಪವುಂಡನ್ನು ಕೊಟ್ಟಿದೆ.

ಜನೆರು ಹೆಚ್ಚು ಹಾಲನ್ನು ಸೇವಿಸುವಂತೆ ಪಾರ್ಲಿಮೆಂಟಿನವರು ಒಂದು ಹೊಸ ಕ್ರಮವನ್ನು ತೊಡಿರುವರು. ಆಕಳುಗಳನ್ನು ಸಾಕುವವರಿಗೆ ಸಹಾಯದ್ರವ್ಯವನ್ನು ಕೊಟ್ಟು, ಹಾಲು ಮತ್ತು ಅದರಿಂದ ತಯಾರಾಗುವ ಇತರ ವಸ್ತುಗಳು ಧಾರಾಳವಾಗುವಂತೆ ಮಾಡಲೂ ನಿರ್ಧರಿಸಿರುವರು. ಹಾಲಿಗೆ ಗಿರಾಕಿಗಳನ್ನು ಹೆಚ್ಚಿಸಲು ಉಪಾಯಗಳನ್ನು ಮಾಡಿರುವರು. ಈ ಕಾರ್ಯಕ್ಕೆ ಲಕ್ಷಾಂತರ ಹಣವನ್ನು ವ್ಯಯಿಸಬೇಕೆಂದಾಗಿದೆ.

ಬ್ರಿಟಿಷ್ ಇಂಡಿಯಾ ದೇಶದ ಚಕ್ರವರ್ತಿ ಸಾರ್ವಭೌವುರಾದ ಎಂಟನೇ ಎಡ್ವರ್ಡ್ ಪ್ರಭುಗಳವರು ತಾ. 1 ನೇ ಸೋಮವಾರ ಬ್ರಾಡ್‌ಕ್ಯಾಸ್ಟ್ ಯಂತ್ರ ಸಹಾಯದ ಮೂಲಕ ಮಾತನಾಡುತ್ತಾ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಒಂದು ಸಂದೇಶ ವನ್ನಿತ್ತರು. ಅವರು ಇಂಡಿಯಾ ದೇಶವನ್ನು ಕುರಿತು ಹೇಳಿದ್ದೇನೆಂದರೆ—ಇಂಡಿಯಾ ದೇಶವು ಸಾವಂತ ರಾಜರುಗಳಿಗೂ ಪ್ರಜೆಗಳಿಗೂ ಚಕ್ರವರ್ತಿ ಪದವಿಯನ್ನು ಪಡೆದ ನಾವು ಈ ಶುಭವಾರ್ತೆಯನ್ನು ಸೂಚಿಸಲಿಚ್ಛಿಸುವೆವು. ಈಚೆಗೆ ಹಿಂದೂಸ್ಥಾನದ ಪ್ರಜೆಗಳು ಐದನೇ ಜಾರ್ಜ್ ಪ್ರಭುಗಳವರ ಮರಣದ ಬಗ್ಗೆ ವ್ಯಕ್ತಪಡಿಸಿದ ವ್ಯಸನವೂ ರಾಜಭಕ್ತಿ ಪ್ರೀತಿಗಳೂ ಈ ಸಂದರ್ಭದಲ್ಲಿ ನಮಗೆ ವಿಶೇಷ ನೆಮ್ಮದಿಯನ್ನುಂಟುಮಾಡಿವೆ. ಯುದ್ಧ ಕಾಲಗಳಲ್ಲಿಯೂ, ಇತರ ವೇಳೆಗಳಲ್ಲಿಯೂ ಬ್ರಿಟಿಷರಿಗೂ ಇಂಡಿಯಾ ದೇಶದವರಿಗೂ ಇರುವ ಸಂಬಂಧವು ಬಹಳ ಪೂರ್ವಕಾಲದಿಂದಲೂ ಗಟ್ಟಿಯಾಗಿ ಬೆಳೆದು ಬಂದಿದೆ. ಈ ಸಂಬಂಧವನ್ನು ಮತ್ತೂ ಬಲಪಡಿಸಿ ಸಮೃದ್ಧಿಗೊಡಬೇಕೆಂಬ ಗಂಭೀರ ಕಾರ್ಯವು ನಮ್ಮ ಮೇಲೆ ಬಿದ್ದಿದೆ ಎಂಬುದಾಗಿ ಹೇಳಿದರು.

ಯುದ್ಧ ವಾರ್ತೆ.

ಮಾರ್ಚ್ ತಾ. 1.

ಅಂಬ ಅಲಗಿಯನ್ನು ಹಿಡಿದರು.

ಕಳೆದ ವಾರದಿಂದ ಟೆಂಬಿಯನ್ ಪ್ರಾಂತ್ಯದ ಅಂಬ ಅಲಗಿಗು ಬಳಿ ಘೋರ ಕದನವು. ರಾಸ್ ಕಾಸ್ಸ ಮತ್ತು ಮುಲುಗೆಟಬರ ಸೈನ್ಯಕ್ಕೂ ಇಟಲಿಯ ನಡುವಿಗೂ ನಡೆಯುತ್ತಲಿತ್ತೆಷ್ಟೆ. ಅದರಲ್ಲಿ ಇಟಲಿಯವರಿಗೆ ಪೂರ್ಣ ಜಯವಾಗಿದೆಂದೂ, ಅಬಿಸೀನಿಯರು ಹಿಂದೋಡಿದರೆಂದೂ ತಿಳಿಯಲಾಗಿದೆ. ಈ ಯುದ್ಧದಲ್ಲಿ ಅನೇಕ ಭಯಂಕರ ಕೈ ಕೈ ಕಾಳಗಗಳಾದವೆಂದೂ ಅಂದಾಜು 3000 ಅಬಿಸೀನಿಯರು ಹತರಾದರೆಂದೂ ತಿಳಿಯಲಾಗಿದೆ.

ರಾಸ್ ಕಾಸ್ಸರವರು ಆತ್ಮಹತ್ಯೆ ಮಾಡಿಕೊಂಡರು.

ಅಂಬ ಅಲಗಿಯಲ್ಲಿನ ಅಪಜಯದಿಂದ ಮನ ನೊತ್ತು ರಾಸ್ ಕಾಸ್ಸರವರು ಆತ್ಮಹತ್ಯೆ ಮಾಡಿಕೊಂಡರೆಂದು ಒಂದು ವಾರ್ತೆ!

ಇಟಲಿಯಲ್ಲಿ ಸಂತೋಷ.

ಅಂಬ ಅಲಗಿಯ ಜಯದಿಂದ ಇಟಲಿಯಲ್ಲಿ ಅಪಾರ ಸಂತೋಷವುಂಟಾಗಿದೆ. ಮುಸಲೋನಿಯವರು ಆಫ್ರಿಕದಲ್ಲಿನ ತಮ್ಮ ಸೈನಿಕರಿಗೆ ಅಭಿನಂದನೆಗಳನ್ನು ಕಳುಹಿಸಿರುವರು.

ಮಾರ್ಚ್ ತಾ. 2.

ರಾಸ್ ಕಾಸ್ಸರವರು ಸತ್ತಿಲ್ಲ.

ರಾಸ್ ಕಾಸ್ಸರವರು ಆತ್ಮ ಹತ್ಯೆ ಮಾಡಿಕೊಂಡಿರುವರೆಂಬ ವಾರ್ತೆಯು ಸುಳ್ಳೆಂದು ಪ್ರಕಟನವಾಗಿದೆ.

ಚಕ್ರವರ್ತಿಗಳು ರಾಜಿ ಪ್ರಸ್ತಾಪವೆತ್ತಿರುವದಿಲ್ಲ.

ಅಬಿಸೀನಿಯಾ ಚಕ್ರವರ್ತಿಗಳು ಇಟಲಿ ಅಬಿಸೀನಿಯರಿಗಳೊಳಗೆ ರಾಜಿ ಮಾಡಬೇಕೆಂದು ಇಂಗ್ಲೆಂಡು ಚಕ್ರವರ್ತಿಗಳಿಗೆ ಪತ್ರ ಬರೆದಿರುವರೆಂದು ಪ್ರಕಟವಾಗಿದ್ದ ವಾರ್ತೆಯು ಸುಳ್ಳೆಂದು ತಿಳಿಯಬರುತ್ತದೆ.

ಅಬಿಸೀನಿಯದ ಪ್ರಕಟಣೆ.

ಅಂಬ ಅಲಗಿಯ ಜಯವು ಇಟಲಿಯವರು ಜಾಹೀರು ಮಾಡಿಕೊಂಡಿರುವಷ್ಟು ಯಶಸ್ವಿಯಾದದ್ದಲ್ಲವೆಂದೂ, ರಾಸ್ ಕಾಸ್ ರಾಸ್ ಸಯೂಮ ಮತ್ತು ಮುಲುಗೆಟ್ಟವರು ಬಹಳ ಚಾತುರ್ಯದಿಂದ ತಮ್ಮ ಸೈನ್ಯಗಳನ್ನು ಹಿಂತಿಗೆದಿರುವರೆಂದೂ, ಅಲ್ಲದೆ ಇಟಲಿಯವರ ಪ್ರಕಟಣೆ ಪ್ರಕಾರ ಅಬಿಸೀನಿಯಾದ ಯಾವ ಸೈನ್ಯವೂ ಇಟಲಿಯವರಿಂದ ಸುತ್ತುಗಟ್ಟಲ್ಪಟ್ಟಿರುವದಿಲ್ಲವೆಂದೂ ಅಬಿಸೀನಿಯಾ ಸರ್ಕಾರವು ಪ್ರಕಟಿಸಿದೆ.

ಮೃತರಾದ ಇಟಲಿ ಸೈನಿಕರು.

ಅಂಬ ಅಲಗಿ ಯುದ್ಧದಲ್ಲಿ 30 ಸೈನ್ಯ ಅಧಿಕಾರಿಗಳೂ, 450 ಬಿಳೀ ಸೈನಿಕರೂ ಮತ್ತು 110 ಇರಿಟ್ರಿಯಾ ಸೈನಿಕರೂ ಹತರಾಗಿರುವರೆಂದೂ, ಎರಡು ವಿಮಾನಗಳು ಕಾಣೆಯಾಗಿರುವರೆಂದೂ ಪ್ರಕಟವಾಗಿದೆ.

ಸ್ವೀಕಾರ ಮತ್ತು ವಿಮರ್ಶೆ.

ಜೇನು ನೊಣ ಸಾಕುವಿಕೆ—(ಸಚಿತ್ರ)
ಪುಟ iv & 45 ಗ್ರಂಥ ಕರ್ತರು—
ಪೈಲೂರು ಲಕ್ಷ್ಮೀನಾರಾಯಣರಾವ್ ಬಿ. ಎ.
ಸುಲ್ಯ. ದ. ಕ. ಬೆಲೆ 0—8—0.

ಈ ಪುಸ್ತಕವನ್ನು ಸಾದರದಿಂದ ಸ್ವೀಕರಿಸಿರುತ್ತೇವೆ.

ಗ್ರಾಮ ಕೈಗಾರಿಕೆಗಳ ಪುನರುಜ್ಜೀವನವಾಗುತ್ತಿರುವ ಈ ಕಾಲದಲ್ಲಿ ಈ ಪುಸ್ತಕವು ಜನರ ಕೈಯಲ್ಲಿ ದೊರೆತಿರುವುದು ಬಹಳ ಸಂತೋಷಕರ. ಕನ್ನಡದಲ್ಲಿ ಇದೇ ಮೊದಲನೇ ಪುಸ್ತಕ. ಗ್ರಾಮ್ಯ ಕೈಗಾರಿಕೆಗಳಲ್ಲಿ ಜೇನು ತಯಾರಿಸುವು ಒಂದು ಮುಖ್ಯ ಕಸಬಾಗಿದೆ. ಸುಧಾರಿಸಿದ ರೀತಿಯಲ್ಲಿ ಜೇನು ನೊಣಪಡಗಳನ್ನು ಸಾಕುವುದು; ಹೀಗೆ ಸಾಕುವುದರಿಂದ ಉಂಟಾಗುವ ಪ್ರಯೋಜನಗಳು, ಕಾಡುಗಳಿಂದ ಜೇನು ನೊಣಗಳನ್ನು ಗುಂಪು ಗುಂಪಾಗಿ ಹಿಡಿದು ಪೆಟ್ಟಿಗೆಗಳಲ್ಲಿ ಸಾಕುವುದು ಇವೇ ಮೊದಲಾದ ವಿಷಯಗಳನ್ನು ವಿಷದವಾಗಿ ವಿವರಿಸಿದೆ. ಚಿತ್ರಗಳಿಂದ ಕೂಡಿರುವದರಿಂದ ಶಾಲೆಗಳಲ್ಲಿ ಬೋಧಿಸಲು ಬಹಳ ಪ್ರಯೋಜನಕಾರಿಯಾಗಬಹುದು. ಅಲ್ಲದೆ ಹಳ್ಳಿಗಳಲ್ಲಿ ಮಡಿಕೆಗಳನ್ನು ಇಟ್ಟು ಜೇನು ಸಂಗ್ರಹಿಸುವವರೂ ಸಹ ಈ ಪುಸ್ತಕಗಳನ್ನು ಓದಿ ಈ ಜೇನು ಹುಳಗಳ ವಿಷಯ ತಿಳಿದುಕೊಳ್ಳುವುದು ಬಹಳ ಉಪಯುಕ್ತವಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ. ಎ. ಜಿ. ಶೆಟ್ಟಿ ಯಂ. ಯಲ್. ಸಿ. ಇವರು ಈ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದಿರುವರು.

ಈ ಪುಸ್ತಕವು ಕೊಡಗಿನಲ್ಲಿ ದೊರೆಯುವ ಸ್ಥಳಗಳು:—

ಕಾರ್ಯದರ್ಶಿ, ಬಾಲಕರ ಸಹಕಾರಿ ಸ್ಟೋರ್ಸ್ ಲಿಮಿಟೆಡ್, ನಾಪೋಕ್ಲು. } ಏಜೆಂಟರು 'ವಿಶ್ವಕರ್ಣಾಟಕ' ಮಡಿಕೇರಿ.

ಸಂತಾಪ ಮೀಟಿಂಗು.

ಪಂಡಿತ ಜವಾಹರ್‌ಲಾಲ್ ನೆಹರುರವರ ಪತ್ನಿ ಶ್ರೀಮತಿ ಕಮಲ ನೆಹರುರವರ ಅಕಾಲ ಮೃತ್ಯುವಿನ ವಾರ್ತೆಯು ತಲಪಿದ ಕೂಡಲೇ ಈ ತಾರೀಕು 1ನೇ ಆದಿತ್ಯವಾರ ಮಧ್ಯಾಹ್ನ ಗೋಣಿಕೊಪ್ಪಲಲ್ಲಿ ಒಂದು ಸಾರ್ವಜನಿಕ ಸಭೆಯು ಸೇರಿತು. ಮೆ. ಕೆ. ಸಿ. ಕರುಂಬಯ್ಯನವರು ಸಭೆಯ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಮೆ. ಪಿ ಐ. ಬೆಳ್ಯಪ್ಪನವರು—ಶ್ರೀಮತಿ ಕಮಲ ನೆಹರುರವರ ಜೀವನ ಚರಿತ್ರೆ, ಅವರು ದೇಶದ ಸ್ವಾತಂತ್ರ್ಯಕ್ಕಾಗಿ ಮಾಡಿದ ತ್ಯಾಗ ಮತ್ತು ಸಹಿಸಿದ ಕಷ್ಟನಷ್ಟಗಳನ್ನು ಕುರಿತು ಭಾಷಣ ಮಾಡಿ ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು.

"ಬರುವ ಲಕ್ನೊ ಕಾಂಗ್ರೆಸಿನ ಅಧ್ಯಕ್ಷರಾಗುವ ಪಂಡಿತ ಜವಾಹರ್‌ಲಾಲ್ ನೆಹರುರವರ ಪತ್ನಿ ಶ್ರೀಮತಿ ಕಮಲ ನೆಹರುರವರ ಅಕಾಲ ಮರಣದಿಂದ ಭಾರತ ಭೂವಿಗೆ ಉಂಟಾದ ಅಪಾರ ನಷ್ಟವನ್ನೂ, ಅದಕ್ಕಾಗಿ ಈ ಸಭೆಯವರು ತಮ್ಮ ಅಗಾಧವಾದ ದುಃಖವನ್ನೂ ಸೂಚಿಸುತ್ತಾರೆ."

ಸಭೆಯವರೆಲ್ಲರೂ ಎದ್ದು ನಿಂತು ವ್ಯಕ್ತರ ಆತ್ಮಕ್ಕೆ ದೇವರು ಶಾಂತಿಯನ್ನೀಯಲೆಂದು 2 ನಿಮಿಷಗಳ ವರೆಗೆ ಮೌನವಾಗಿ ಪ್ರಾರ್ಥಿಸಿ ಠರಾವನ್ನು ಮಂಜೂರು ಮಾಡಿದರು.

ಪೂರ್ವ ಆಫ್ರಿಕದ ಕೊಡಗರ ಸಂಘದ 1935 ರ ವಾರ್ಷಿಕ ವರದಿ.

ಪ್ರತಿ ವರ್ಷವೂ ಮೇಲಿನ ಸಂಘದ ವಾರ್ಷಿಕ ವರದಿಯನ್ನು 'ಕೊಡಗು' ಪತ್ರಿಕೆಯಲ್ಲಿ ಪ್ರಕಟಿಸುತ್ತ ಬಂದಂತೆ ಈ ವರ್ಷದ 6 ನೇ ವಾರ್ಷಿಕ ವರದಿಯನ್ನು ಯಥಾ ರೀತಿ ವಾಚಕ ಮಹಾಶಯರ ಮುಂದಿಡಲು ಕುತೂಹಲವುಳ್ಳವನಾಗಿರುವೆನು.

ಸಂಘದ ಕೂಟ ಮತ್ತು ಚಳವಳಿ—ಗತ ವರ್ಷದಲ್ಲಿ ಸಾಧಾರಣ ತಂದ 6 ವಿೂಟಿಂಗುಗಳು ಮೊತ್ತ ಜರಗಿರುವವು ಕಳೆದ ಡಿಸೆಂಬರು 25ಕ್ಕೆ ಏರ್ಪಡಿಸಿದ ವಾರ್ಷಿಕ ವಿೂಟಿಂಗನ್ನು ಈ ಸಂಘದ ಕೆಲವು ಮೆಂಬರುಗಳು ಡಾರಸೇಲಮಿನಿಂದ ಹೊರಗೆ ರಜೆಯಲ್ಲು ಹೋಗಿದ್ದುದರಿಂದ, 1936 ನೆ ಫೆಬ್ರವರಿ 9ಕ್ಕೆ ತಳ್ಳಬೇಕಾಯಿತು. ಈ ಸಂಘದ ಕೆಲಸ ಕಾರ್ಯಗಳು ಗತ ವರ್ಷ ಮತ್ತು ಹಿಂದಿನ ವರ್ಷಗಳಂತೆಯೇ ಉತ್ತಮ ರೀತಿಯಲ್ಲಿ ನಡೆದವು. ಆದರೆ ಈ ಸಂಘದ ಎಲ್ಲಾ ಮೆಂಬರುಗಳು ಒಂದು ಕಡೆಯಲ್ಲಿಲ್ಲದೆ ಟಂಗನೀಕದ ಎಲ್ಲೆ ಸಲ್ಲೆಗಳಲ್ಲಿರುವುದರಿಂದಲೂ, ಸಂಘದಲ್ಲಿ ಶಕ್ತವಾದ ಐಕ್ಯಮತ್ಯ ಮತ್ತು ಮಿಳಿತವನ್ನು ಬೇರೂರಿಸಲು ಸರಿಯಾದ ಅವಕಾಶ ಸಿಕ್ಕದ್ದರಿಂದಲೂ, ಎಲ್ಲರ ಮನೋಭಿಲಾಷೆಯಂತೆ ಸಾಧ್ಯವಾದಷ್ಟು ಫಲಿತಾಂಶವನ್ನು ಹೊಂದಲು ಇಷ್ಟರ ವರೆಗೆ ಸಾಧ್ಯವಾಗಲಿಲ್ಲವೆಂಬ ವಿಷಯಕ್ಕೆ ವ್ಯಸನ ಪಡಬೇಕಾಗಿದೆ.

ಹೊಸ ಮೆಂಬರುಗಳ ಪ್ರವೇಶ—ಮೆಸರ್ಸ್ ಯಂ. ಪಿ. ಕುಶಾಲಪ್ಪನವರು ಹೊಸ ಮೆಂಬರಾಗಿಯೂ, ಮೆ. ರಾ. ಯಂ. ಡಿ. ಚಂಗಪ್ಪನವರು ಗೌರವ ಮೆಂಬರಾಗಿಯೂ ಪ್ರವೇಶ ಮಾಡಿದುದರಿಂದ ಈ ಸಂಘದ ಮೆಂಬರುಗಳ ಸಂಖ್ಯೆಯು ಅಷ್ಟೇನೂ ಕಡಿಮೆಯಾಗಿರುವುದಿಲ್ಲ.

ಆರ್ಥಿಕ ವ್ಯವಸ್ಥೆ—ಈ ಸಂಘದ ಒಂಡವಾಳವು ಕೇವಲ ಕಿಂಚಿತವಾದುದರಿಂದಲೂ ಮತ್ತು ಹೊಸ ರೂಲ್ಸುಗಳ ಮೇರೆ ವರ್ಷದ ಚಂದಾ ಹಣವನ್ನು ಬಹು ವಿಟ್ಟಿಗೆ ಕಮ್ಮಿ ದರಕ್ಕೆ ಇಳಿಸಿರುವುದರಿಂದಲೂ, ಕೊಡಗಿನ ವಿದ್ಯಾಭಿವೃದ್ಧಿ ಫಂಡಿಗೆ ಕೊಂಚ ದ್ರವ್ಯ ಸಹಾಯ ಮಾಡಬೇಕೆಂದಿದ್ದ ಕಾರ್ಯವ್ಯಯವ್ಯರ್ಥವಾದುದಕ್ಕೆ ಈ ಸಂಘದ ಮೆಂಬರುಗಳು ಮನಪೂರ್ವಕವಾಗಿ ವಿಷಾದಿಸುತ್ತಾರೆ. ಎಷ್ಟೋ ದೂರದಿಂದ ತಮ್ಮ ತಮ್ಮ ನೂತ್ಯ ಭೂಮಿಯನ್ನು ಬಿಟ್ಟು ಬಂದು ಸ್ಥಾಪಿಸಿದಂಥ ಈ ಸಂಘದ ಒಂಡವಾಳವು ದಿನೇ ದಿನೇ ಬಹಳ ಚಾಲ್ತಿನೋಪಾದಿಯಲ್ಲಿ ವೃದ್ಧಿಯಾಗಲು ದೇವರು ತಕ್ಕ ಮನಸ್ಸನ್ನು, ಉತ್ಸಾಹವನ್ನೂ ಈ ಸಂಘಕ್ಕೆ ಸಮ್ಮಂಧಪಟ್ಟ ಎಲ್ಲಾ ಮೆಂಬರುಗಳಿಗೆ ಕೊಡಲೆಂದು ಏಕ ಮನಸ್ಸಿನಿಂದ ಪ್ರಾರ್ಥಿಸುತ್ತೇನೆ.

ವ್ಯಸನಕರವಾದ ಸಂಗತಿ—ಗತ ವರ್ಷದಲ್ಲಿ ಮೆ. ಚೇಂದ್ರಿಮಾಡ ಬೆಳ್ಯಪ್ಪನವರು ತಮ್ಮ ಪ್ರೀಯ ಪುತ್ರನನ್ನೂ ಮತ್ತು ಮೆ. ಕುಟ್ಟೀಟೀರ ನಂಜಪ್ಪನವರು ಮತ್ತು ಕಂಡ್ರತಂಡ ಪೊನ್ನಪ್ಪನವರು ತಮ್ಮ ಪಿತೃಗಳನ್ನು ಕಳೆದುಕೊಂಡ ದ್ದಕ್ಕಾಗಿ ಈ ಸಂಘದ ಮೆಂಬರುಗಳು ತಮ್ಮ ಸಂತಾಪವನ್ನು ಶಿವಾಧೀನರಾದವರ ಇಷ್ಟಮಿತ್ರರಿಗೂ, ಬಂಧು ಬಳಗದವರಿಗೂ ಈ ಮೂಲಕ ಕಳುಹಿಸುವುದಲ್ಲದೆ ಪರಲೋಕವಾಸಿಯಾದವರ ಆತ್ಮಕ್ಕೆ ಶಾಂತಿಯನ್ನೂ, ಮುಕ್ತಿಯನ್ನೂ ದಯೆ ಪಾಲಿಸಲೆಂದು ಈ ಮೂಲಕ ದೇವರನ್ನು ಪ್ರಾರ್ಥಿಸುತ್ತೇವೆ.

ಬಾತ್ಮಿಗಳು—ಕೊಡಗು ವಿದ್ಯಾಭಿವೃದ್ಧಿ ಸಂಘದ ಸೆಕ್ರೆಟರಿಯವರಾಗಿದ್ದ ಮೆ, ಕೆ. ಯಂ, ಬೆಳ್ಯಪ್ಪನವರು ತಾ, 18.1-35 ರಲ್ಲು, ನಮ್ಮ ಸಂಘವು ಅವರ ವಿನಂತಿ ಮೇರೆ ದ್ರವ್ಯಸಹಾಯ ಮಾಡಲಿಲ್ಲವೆಂದು ಬಹಿರಂಗವಾಗಿ 'ಕೊಡಗು' ಪತ್ರಿಕೆಯಲ್ಲು ತಿಳಿಸಿದ ಲೇಖನಕ್ಕೆ ತಕ್ಕುದಾದ ಪ್ರತ್ಯುತ್ತರವನ್ನು ಸದರಿ ಪತ್ರಿಕೆಯಲ್ಲು ತಾ. 6—12—35ರಲ್ಲಿ ಈ ಸಂಘದ ಸೆಕ್ರೆಟರಿಯವರು ಪ್ರಚುರಪಡಿಸಿರುತ್ತಾರೆ,

ಸಂತೋಷ ಕೂಟಗಳು—ಡಾರಸೇಲಮಿನ ಕೊಡಗರು ಸೇರಿ ಈ ಸಂಘದ ಪರವಾಗಿ ಕೊಡಗರ ಪ್ರಖ್ಯಾತಿ ಪಟ್ಟ ಹಬ್ಬಗಳಾದ ಕೈಲ್ ಮೂಹೂರ್ತ ಮತ್ತು ಹುತ್ತರಿ ಹಬ್ಬಗಳನ್ನು ಬಹು ವಿಜೃಂಭಣೆಯಿಂದ ಆಚರಿಸಿದರು. ಕಾರಣಾಂತರದಿಂದ ಕಾವೇರಿ ಸಂಕ್ರಮಣ ಹಬ್ಬವನ್ನು ಜರುಗಿಸಲು ಅವಕಾಶವಾಗಲಿಲ್ಲ.

ಈ ಸಂಘಕ್ಕೆ ಸಂಬಂಧಪಟ್ಟ ಎಲ್ಲಾ ಕಾರ್ಯಕಲಾಪಗಳನ್ನು ಜಯಪ್ರದವಾಗಿ ನೆರವೇರಿಸಲು ಸಹಾಯವನ್ನೂ ನನ್ನ ಮತ್ತು ಪ್ರೋತ್ಸಾಹವನ್ನೂ ನೀಡಿದ ಪ್ರೆಸಿಡೆಂಟರಿಗೂ ಮತ್ತು ಎಲ್ಲಾ ಮೆಂಬರುಗಳಿಗೂ ಮನಪೂರ್ವಕವಾಗಿ ವಂದಿಸಿ, 1935ನೇ ಇಸವಿಯ ವಾರ್ಷಿಕ ವರದಿಯನ್ನು ಮುಕ್ತಾಯಗೊಳಿಸುವೆನು.

ಯಂ. ಜಿ. ಕುಶಾಲಪ್ಪ,
(ಗೌ. ಕಾರ್ಯದರ್ಶಿ.)

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ಗವರ ಜವಾಬ್ದಾರಿಕೆ ಮೇಲೆ ರೀತಿ ಪುಸ್ತಕಗಳು ಕೊಡಲಾಗಿವೆ. ಪಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರೀತಿ ಪಡೆಯಬೇಕಾಗಿ ಕೋರಿಕೆ.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮಂಡೇಪಂಡ ಸೋಮೆಯ್ಯನವರು,
ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,
ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುಪ್ಪಮೆಯ್ಯನವರು,
ಹುದಿಕೇರಿ & ತಿತಿಮತ್ತಿ—ಮೆ. ಜಿ ಮೊಣಮೆಯ್ಯನವರು,
ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಚ್ಚಯ್ಯನವರು,
ಸೋಮವಾರಪೇಟೆ—ಮೆ. ಕೆ. ಮೊಗಪ್ಪನವರು
ನಾಪೋಕ್ಲು—ಮೆ, ಬೆಳ್ಳಿಪಂಡ ಯಂ, ಪೂಣಚ್ಚನವರು,
(ನಾಪೋಕ್ಲು ಸ್ಟೋರ್ಸ್)

ಸೂಚನೆ.—ಪ್ರಂಟು ಆದ ರೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.



"ಖಾದಿ ವಸ್ತ್ರಗಳನ್ನು ಒಗೆಯಲಿಕ್ಕಾಗಿ 501 ಸೋಪಿನ ಸಾಬೂನನ್ನು ಉಪಯೋಗಿಸಿರುವೆಯಾ?"

"ಅದು ಖಾದಿ ವಸ್ತ್ರವನ್ನು ಅತೀ ಸ್ವಚ್ಛ ಮತ್ತು ಹೊಸ ತಾನು ಮೂಡುವದಾಗಿ ಕಂಡು ಬಂದಿದೆ."

ಬೆಚ್ಚ ಕಡಿಮೆ.
ವಸ್ತ್ರ ಬಾಳಿಕೆ.
ಶ್ರಮ ಅತೀ ಕಡಮೆ!

ಟಾಮ್‌ಕೋ
ಮೂರಾಟದ ಮಳಿಗೆ,

ಟಿ. ಸೆಂಟ್ರಲ್ ಸ್ಟ್ರೀಟ್,
ಬೆಂಗಳೂರು ದಂಡು.

501 Soap

ತಯಾರಿಸುವವವರು—ತಾತಾ ಆಯಿಲ್ ಮಿಲ್ಸ್, ಕಂಪೆನಿ, ಲಿಮಿಟೆಡ್, ಬೊಂಬಾಯಿ, ಮತು ಕಾಶಾಪುರ.

52—41. ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ನೂತನ! ಮನೋಲ್ಲಾಸಕರ!! ಶುಚಿಕರ!!! ಆದರ್ಶ ವಿಶ್ರಾಂತಿಗೃಹ!!!!

ಬೊಂಬಾಯಿ ರೆಸ್ಟೋರೆಂಟ್

ಇದೇ ತಾ. 19—12—1935ರಲ್ಲಿ ಮಡಿಕೇರಿ ಚೌಕದಲ್ಲಿರುವ ಹೊಸ ಕಟ್ಟಡದಲ್ಲಿ ತೆರೆಯಲ್ಪಟ್ಟಿದೆ.

ಆರೋಗ್ಯಕರವೂ ಆಧುನಿಕವೂ ಆದ ಉಪಹಾರ ಗೃಹವೊಂದನ್ನು ನಿರೀಕ್ಷಿಸುವ ಮಹನೀಯರುಗಳ ಸೌಕರ್ಯಕ್ಕಾಗಿ ತೆರೆಯಲಾಗುವುದು.

ಶುದ್ಧವೂ, ಪುಷ್ಟಿಕರವೂ, ಆರೋಗ್ಯಕರವೂ ಆದ ತಿಂಡಿತಿನಸುಗಳನ್ನೂ

ಕಾಫಿ—ಚಹಾ—ಕೊಕ್ಕೋ—ಶರ್ಬತ್ತು ಇತ್ಯಾದಿ ಪಾನೀಯಗಳೂ—
ಕೇವಲ ಹಲವು ವರ್ಷಗಳ ಅನುಭವಿಕರಿಂದ ತಯಾರಿಸಲ್ಪಡುವುದು.

ಗಿರಾಕಿಗಳ ಸೌಕರ್ಯವನ್ನು ಲಕ್ಷಿಸಿ, ಆಸನಗಳ—ವಿಶಾಲ ಕೊಠಡಿಗಳ—ಕಾಯೋರ್ತ್ಸಾಹೀ ವಿನೀತ ಸೇವಕರ ಏರ್ಪಾಡ ಇದೆ.

ಆಯಕ್ಕೆ ತಕ್ಕ ವ್ಯಯಮಾಡುವವರು, ವ್ಯಯಕ್ಕೆ ತಕ್ಕ ಆಯನನ್ನು ಹೊಂದಬೇಕಾದ ಅತ್ಯಾಧುನಿಕ ಈ ವಿಶ್ರಾಂತಿಗೃಹದಲ್ಲಿ—

ನೀವು ಅಪೇಕ್ಷಿಸಿದ—ನೀವು ನಿರೀಕ್ಷಿಸಿದ—ನೀವು ಹೊಂದಲೇಬೇಕಾದ—
ಸಕಲ ಆನಕೂಲತೆಗಳನ್ನು ಕಂಡು, ಪೂರ್ಣ ತೃಪ್ತಿಹೊಂದಿರಿ.

ಮದುವೆ ಮತ್ತು ಉಪನಯನ ಸಮಾರಂಭಗಳಲ್ಲಿಯೂ ಮತ್ತು "ಟೀ"ಪಾರ್ಟಿ—

"ಎಟ್-ಹೋಮ್"ಗಳಲ್ಲಿಯೂ ನಮ್ಮನ್ನು ಮರೆಯಬೇಡಿ.

52—12 ಪ್ರೊಪ್ರೈಟರ್:—ಸಾಹುಸನ ರಾವ್, ಗಾಯತೊಂಡೆ.

ಪ್ರಸಿದ್ಧ ಔಷಧಗಳು.

ಮಲೇರಿಯಾಕ್ಕೆ ಒಂದೇ ಸಿದ್ಧೌಷಧ.

ಶುದ್ಧವಾದ ಹಿಂದೂಸ್ಥಾನದ ಮೂಲಿಕೆಗಳಿಂದ ತಯಾರಾದದ್ದು.
ಕ್ವಿನಿನನ್ನು ಯಾವ ರೂಪದಲ್ಲೂ ಸೇರಿಸಿಲ್ಲ.

"ನವರತ್ನ ಅಲ್ಯಾರಿಯಾ"

ಹಿಂದೂದೇಶದ ಔಷಧಗಳ ವಿಚಾರದಲ್ಲಿ ಶ್ರೇಷ್ಠತೆಯನ್ನು ಪಡೆದ ಡಾ. ಕೆ. ಯಂ ನಾಡ್ಕರ್ಣಿ ಮತ್ತು ಡಾ. ಕೆ. ಸಿ. ಬೋಸ್‌ರವರ ಗ್ರಂಥಗಳಿಗನುಗುಣವಾಗಿ ಅತೀ ಪರಿಣಾಮಕಾರಕ ಔಷಧಗಳ ಸಂಯೋಜನೆಯಿಂದ ತಯಾರಿಸಲ್ಪಟ್ಟ ಈ ಔಷಧವು ಹೆಚ್ಚು ಫಲಕಾರಿಯಾಗಿರುವದು.

ಇದರಲ್ಲಿರುವ ಔಷಧಗಳು.

1. Andrographis Paniculate
2. Cocculas Cordifolius
3. Berriberies Aristata
4. Vernonis Cinerarea
5. Evolvulas Alsinoides
6. Dashmoola
7. Aconitum Heterophylum
8. Alstonia Scholaris

ಮಲೇರಿಯಾಕ್ಕೆ ಅತ್ಯುತ್ತಮ ಔಷಧಿ. ಕ್ವಿನಿನನ್ನು ಯಾವ ವಿಧದಲ್ಲೂ ಸೇರಿಸದೆ ಯಾವ ಬಾಬಿನಲ್ಲೂ ಹಾನಿಕರವಾಗದ ಸಂಜೀವಿನಿ. ಇದನ್ನು ಎಷ್ಟು ಸೇವಿಸಿದರೂ ಕ್ವಿನೀನ್ ಸೇವನೆಯಿಂದ ಉಂಟಾಗಬಹುದಾದ ಮಹಾ ಹಾನಿಗಳ ಭಯವೇ ಇಲ್ಲ. ಒಮ್ಮೆ ಪರೀಕ್ಷಿಸಿದಲ್ಲು ಮತ್ತೆ ಬಿಡಲಾರಿರಿ.

ತಯಾರಿಸುವವರು:—**ದಿ ನವರತ್ನ ಫಾರ್ಮಸಿ,**
ಪೋ. ಬಾ. ನಂಬರು 68. ಕೊಚಿನ್.

ಸ್ಟೋಕಿಸ್ಟ್—ಎ. ಎಸ್. ಮೂಚಯ್ಯ, ಬಟ್ಟೆ ವ್ಯಾಪಾರಿ, ಸುಂಟಿಕೊಪ್ಪೆ.
ಏಜೆಂಟ್—ವಿ. ಬಿ. ಕಾಮತ್, ಮಹದೇವಪೇಟೆ, ಮಡಿಕೇರಿ.
52—39

ನವರತ್ನ ಫಾರೆಸಿ,

ಡಾಕ್ಟರ್ ಫ್ರಾನ್ಸಿಸ್ ಪಿಂಟೊ
ದಂತ ವೈದ್ಯರು.

ನಿಮ್ಮ ಹಲ್ಲನ್ನು ಉಚಿತವಾಗಿ ಪರೀಕ್ಷಿಸುವರು.

ನಿಮ್ಮ ಶರೀರಕ್ಕೆ ನೋವಿಲ್ಲದಂತೆ ನಿಮ್ಮ ದಂತಕ್ಕೆ ಶಸ್ತ್ರ ಕ್ರಿಯೆ ನಡೆಸಿ ಹಲ್ಲು ಕೀಳುವರು, ಶುಭ್ರಪಡಿಸುವರು, ವಕ್ರತೆ ಕೂತಗಳನ್ನು ಮುಚ್ಚುವರು ಅಗಿಯುವದಕ್ಕೂ, ಮಾತನಾಡಲಿಕ್ಕೂ, ಸೌಂದರ್ಯಕ್ಕೂ, ಉಪಯೋಗವಾಗುವಂಥಾ, ನೋಡಲು ನಿಜವಾದಂಥಾ ಕೃತಕ ಹಲ್ಲುಗಳನ್ನು ಬಹಳ ಉತ್ತಮ ತರಗತಿಯ ಸಾಮಾನುಗಳಿಂದಲೂ ಮತ್ತು ಕೆಲಸದಿಂದಲೂ, ಮಿತವ್ಯಯದಿಂದಲೂ, ಖಾತ್ರಿಯಾಗಿ ನಿಮ್ಮ ಮನಸ್ಸೊಪ್ಪುವಂತೆ ಕಟ್ಟಿ ಕೊಡುವರು.

4—2 ವೀರಾಜಪೇಟೆ, (ದ. ಕೊಡಗು)

ಪತ್ರವ್ಯವಹಾರ.

[ಚಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ಬಸ್ಸ್ ಸರ್ವಿಸಿನವರ ನಿರ್ಲಕ್ಷ್ಯತೆ.

ಅಯ್ಯಾ,

ಕಳೆದ ಫೆಬ್ರವರಿ ತಾ, 19 ರಲ್ಲಿ ನಾನು ಕಾವೇರಿಗೆ ಕುಟುಂಬ ಸಮೇತ ಹೊರಟಲ್ಲು ಗೋಣಿಕೊಪ್ಪಲಿನಲ್ಲಿ ಇದಿ ಶ್ರೀ ಕಾವೇರಿ ಬಸ್ಸಿನ ಏಜಂಟ್ ರಿಟರ್ನ್ ಟಿಕೇಟು ಕೊಟ್ಟು ನನ್ನ ಕೈಯಿಂದ ಚಾರ್ಜು ವಸೂಲು ಮಾಡಿಕೊಂಡರು. ಚಾರ್ಜಿಗೆ ಹಿಂದು ಫಳಿಗೆಯು ಸಹ ಪುರುಸತ್ತು ಕೊಡಲಿಲ್ಲ. (ಆ ದಿನ) ಬಸ್ಸ್‌ನಲ್ಲಿ ಜಾಗ ಇಲ್ಲವೆಂದು ನಮ್ಮನ್ನು ನಿಲ್ಲಿಸಿದರು. ನಾನು ಕೇಳುವಾಗ್ಗೆ ನಾಳೆ ಬೆಳಿಗ್ಗೆ 8 ಗಂಟೆಗೆ ನಿಮಗೆ ಸೀಟು ಕೊಡುತ್ತೇನೆಂದು ಹೇಳಿದ ಕಾರಣ ಆ ದಿನ ರಾತ್ರಿ ಅಲ್ಲಿಯೇ ಇರಬೇಕಾಯಿತು ಮೂರನೆ ದಿನ 8 ಗಂಟೆಗೆ ಅವರಲ್ಲಿಯೂ ಜಾಗ ಇಲ್ಲ, 3 ಗಂಟೆಗೆ ಹೋಗಬಹುದೆಂದು ಹೇಳಿದರು. ಆಗ ನಾನು ನನ್ನ ಚಾರ್ಜು ಕೊಡಿ, ನಾನು ಬೇರೆ ಬಸ್ಸ್‌ನಲ್ಲಿ ಹೋಗುತ್ತೇನೆ ಎಂದು ಹೇಳಿ ಸ್ವಲ್ಪ ಸಕತ್ತಾದ ಪಾತಾಡಿದ ಕಾರಣ ಅವರು ಆ 8 ಗಂಟೆ ಬಸ್ಸ್‌ನಲ್ಲಿ ವೀರಾಜಪೇಟೆಗೆ ಹೋಗಿ ಒಂದು ಎಂಟು ಸೀಟರ್ ಬಸ್ಸು ತಂದು ನಮ್ಮನ್ನು ಪೊಳ್ಳೆಬಿಟ್ಟ ಕ್ಕಾಗಿ ತಂದು ಮಧ್ಯಾಹ್ನ 2 ಗಂಟೆಗೆ ಮಡಿಕೇರಿಗೆ ಬಿಟ್ಟದ್ದಾಯಿತು. ನಮಗೂ, ಸಣ್ಣ ಮಕ್ಕಳಿಗೂ ಉಪವಾಸ ಇಂಬೇಕಾಯಿತು. ಮೂರನೆ ದಿನ ಬಹಳ ಕಷ್ಟದಲ್ಲಿ ಕಾವೇರಿಗೆ ಬಸ್ಸ್‌ನಲ್ಲಿ ಹೋದದ್ದಾಯಿತು. ಮೂರನೆ ದಿನ ಬೆಳಿಗ್ಗೆ ಅದೇ ಬಸ್ಸ್‌ನಲ್ಲಿ ರಿಟರ್ನ್ ಟಿಕೇಟ್‌ನವರಿಗೇ ಕಷ್ಟದಲ್ಲಿ ಜಾಗ ಕೊಟ್ಟು, ಬೇರೆ ಜನರಿಗೆ ಆಗ ಹಣ ಕೊಟ್ಟವರಿಗೆ ಒಳ್ಳೆ ಜಾಗವನ್ನು ಕೊಟ್ಟು ಮಡಿಕೇರಿಗೆ ಬಿಟ್ಟದ್ದಾಯಿತು, ನಾನು ಒಡನೆ ಆಫೀಸಿಗೆ ಹೋಗಿ ಮೇನೇಜರಿಗೆ ಹೇಳಿದನು. ಈ ದಿನ 3 ಗಂಟೆ ಸಮಯಕ್ಕೆ ಬಸ್ಸು ಹೋಗುತ್ತದೆಂದು ಹೇಳಿದ ಕಾರಣ ಸಣ್ಣ ಮಕ್ಕಳನ್ನು 2 ಗಂಟೆ ಸಮಯಕ್ಕೆ ಬಸ್ಸ್ ಸ್ಟೇಂಡಿಗೆ ಕರಕೊಂಡು ಹೋಗಿ ಕಾದು, ನನ್ನ ಸಾಮಾನುಗಳು ಕೊಂಗಟ್ಟಿರ ಮನೆಯಲ್ಲಿ ಇದೆ, ಡ್ರೈವರ್ ಮತ್ತು ಕಂಡಕ್ಟರನ್ನು ಅವರ ಮನೆಯ ವರೆಗೆ ಕಳುಹಿಸಿಕೊಡಿ, ಸಣ್ಣ ಮಕ್ಕಳು ಇದ್ದಾರೆ' ಎಂದು ಮೇನೇಜರವರಿಗೆ ಹೇಳಿದೆನು. ಕಂಡಕ್ಟರಿಗೆ ಹೇಳಿದರೆ ಬಸ್ಸು ತಂದು ನಿಮ್ಮ ಸಾಮಾನುಗಳನ್ನು ತಂದು ಕೊಡುತ್ತಾರೆ ಎಂದು ಮೇನೇಜರವರು ನನಗೆ ಹೇಳಿದ ಕಾರಣ, ನಾನು ಕಂಡಕ್ಟರ್ ಮತ್ತು ಡ್ರೈವರ ಬಸ್ಸ್ ರಿಪೇರಿ ಮಾಡಿಕೊಂಡು ಇನ್ನಾಗ್ಗೆ ಹೇಳಿದೆನು. ನನ್ನ ಅಳು ಕಳುಹಿಸಿ ಫಲಸಹ ತಿಳಿಸಿದೆನು. ಸ್ವಲ್ಪ ಹೊತ್ತಿನನಂತರ ನಾನು ಸಹ ಮೇನೇಜರಿಗೆ ಹೋಗಿ 'ಬಸ್ಸ್ ಒರಲಿಲ್ಲ, ಸಾಮಾನುಗಳನ್ನು ಹೊರಗೆ ಇಟ್ಟಿದ್ದೇನೆ, ದಯವಿಟ್ಟು ಬಸ್ಸ್‌ನವರಿಗೆ ಹೇಳಿ ನನ್ನ ಸಾಮಾನು ಇರುವ ಜಾಗಕ್ಕೆ ಬರ ಹೇಳಬೇಕು. ಎಂದು ಹೇಳಿದ ಕಾರಣ ಅವರು, 'ನೀವೇ ಹೋಗಿ ನಾನು ಹೇಳಿದೆನೆಂದು ಹೇಳಿದರೆ ಬಸ್ಸ್ ತರ ತ್ತಾರೆ'ಂದು ಹೇಳಿದ್ದರಿಂದ ನಾನು ಬಸ್ಸ್ ಸ್ಟೇಂಡಿಗೆ ಹೋಗಿ ಡ್ರೈವರ್ ಮತ್ತು ಕಂಡಕ್ಟರ್ ಮತ್ತು ಏಜಂಟರವರಿಗೂ ಹೇಳಿದನು. ಹೇಳುವಾಗ್ಗೆ ಬಸ್ಸ್‌ನಲ್ಲಿ ಪೆಟ್ರೋಲ್ ಇಲ್ಲ, ಬೇರೆಯವರಿಂದ ಸಾಲ ತೆಗೆದದ್ದಾಯಿತು. ಎಂದು ಹೇಳಿ ನನ್ನನ್ನು ½ ಗಂಟೆ ಅಲ್ಲಿಕಾಯಿಸಿ ಬಿಟ್ಟು, ನನಗೆ ರಿಜರ್ವ್ ಮಾಡಿದ ಜಾಗಕ್ಕೆ ಬೇರೆ ಜನರನ್ನು ಟಿಕೇಟು ಕೊಟ್ಟು ಕೂರಿಸಿ, ಬಸ್ ಹೊರಡುವ ಸಮಯಕ್ಕೆ ಬರಲಾಗುವುದಿಲ್ಲವೆಂದು ಹೇಳಿ ಬಸ್ಸ್ ಸೀದಾ ಹೊರಟು ಬಿಟ್ಟಿತು.

ಬಸ್ಸಿಗೆ ಮೊದಲು ಹಣ ಕೊಟ್ಟವರ ಕಾರಣ ಕಂಡವರ ಮನೆಯಲ್ಲಿ ಇದ್ದುಕೊಂಡು ಸಣ್ಣ ಮಕ್ಕಳನ್ನು ತೊಂದ್ರೆಪಡಿಸಿಕೊಂಡು ಇಂಬೇಕಾಯಿತು. ಮೇನೇಜರ್ ಹೇಳಿದ ಹಾಗೆ ನಡೆಯದಂಥ ಡ್ರೈವರ್ ಮತ್ತು ಕಂಡಕ್ಟರನ್ನು ಇಟ್ಟುಕೊಂಡು ಜನರಿಗೆ ತೊಂದರೆ ಕೊಡುವಂಥಾ ಸರ್ವೀಸ್ 'ಆದಿ ಕಾವೇರಿ' ಎಂದು ಹೆಸರನ್ನಿಟ್ಟುಕೊಂಡಿದೆ. ಆದ ಕಾರಣ ಇನ್ನೂ ಮುಂದಕ್ಕೆ ಯಾರೂ ಯಾವ ಬಸ್ಸ್‌ನಲ್ಲಿಯೂ ಸಹ ರಿಟರ್ನ್ ಟಿಕೇಟು ತೆಗೆದು ಕಷ್ಟಪಡಬೇಡಿ, ಬೇರೆ ಸರ್ವೀಸ್ಸಿನಲ್ಲಿ ಹೋದರೆ ಏಜಂಟರುಗಳು ಮತ್ತು ಡ್ರೈವರ್‌ಗಳು ಒಳ್ಳೆ ಸಹಾಯ ಮಾಡುತ್ತಾರೆ ನಮ್ಮ ಜನರೆಂದು ನಾವು ತಿಳಿದು, ಇವರ ಬಸ್ಸಿನಲ್ಲಿ ಟಿಕೇಟು ತೆಗೆದ ಕಾರಣ ಬಹಳ ಜನರು ಕಷ್ಟಪಟ್ಟಿರುತ್ತಾರೆ. ಅವರೆಲ್ಲರೂ ನನ್ನ ಸಂಗಡಲೇ ಬಂದಿದ್ದರು. ಇನ್ನಾದರೂ ಸರ್ವಿಸಿನವರು ತಮ್ಮ ಧೋರಣೆಯನ್ನು ಬದಲಾಯಿಸುವರೇ?

ಸಿ. ಯಸ್. ಮುದ್ದಪ್ಪ.

ಬಗ್ಗಿದ ಬೆನ್ನಿಗೆ ಗುದ್ದು! ಒದೆಯುವ ಕಾಲಿಗೆ ಮುದ್ದು!



(ಲೇ. ಪಂಡಿತ ತಾರಾನಾಥರು).

ಸ್ವಾರ್ಥವು ಎಲ್ಲ ವಿಧಗಳಿಂದಲೂ ನಾಶನೂಡುತ್ತಿದೆ ಮಂತ್ರ ತಂತ್ರಗಳ ಕಾಟ ಒಂದು ಕಡೆಯಾದರೆ ಯಂತ್ರಗಳ ಕಾಟವು ಇನ್ನೊಂದು ಕಡೆ. ಅದಕ್ಕೊಂದು ಕಾಲವಾದರೆ ಇದಕ್ಕಿನ್ನೊಂದು ಕಾಲ. 'ಅಂತೂ ಇಂತೂ ಕುಂತಿ ಮಕ್ಕಳಿಗೆ ವನವಾಸ' ಎಂಬಂತೆ ಒಡವರ ಗತಿ.

ಬ್ರಿಟಿಷ್ ರಾಜ್ಯದಲ್ಲಿ ಮೊತ್ತ 1914ರಿಂದ 1919ರ ವರೆಗೆ ಮಹಾ ಘೋರ ಯುದ್ಧದಲ್ಲಿ ಗಾಯ ಹೊಂದಿದವರು 16,93,262. ಆದರೆ 1919ರಿಂದ 1934ರ ವರೆಗೆ ನಡೆದ ಯಂತ್ರಗಳಿಂದ ಗಾಯ ಹೊಂದಿದವರು 23,85,766 ಮಂದಿ. ಗನಿಗಳಲ್ಲಿ ಸತ್ತವರನ್ನು ನಾಲ್ಕು ನಾಲ್ಕರಂತೆ ಸಾಲಾಗಿ ನಿಲ್ಲಿಸಿದರೆ ಅವರ ಪಂಕ್ತಿಯು 45 ಮೈಲುದ್ದ ಹೋಗುವುದು ಎಂದು 'ಟಿಟ್-ಬಿಟ್ಸ್' ಹೇಳುತ್ತದೆ. ಏಳು ದಿನಗಳ ವರೆಗೆ ಎದ್ದೇಳಗೊಡದ ಅಪಾಯಕ್ಕೆ 2,12,256 ಕೂಲಿಗಳು ಬೀಳುತ್ತಾರಂತೆ. 1297ಕ್ಕೆ ಪ್ರಾಣಕ್ಕಪಾಯಕಾರಿಯಾದ ಪೆಟ್ಟುಗಳು ಹತ್ತುತ್ತವಂತೆ. ಬ್ರಿಟಿಷ್ ರಾಜ್ಯದಲ್ಲಿ ದಿನಕ್ಕೆ ಐದು ಮಂದಿ ಗನಿಯಲ್ಲಿ ಸಾಯುತ್ತಾರೆ; 8540ಕ್ಕೆ ಪೆಟ್ಟು ಹತ್ತುತ್ತದೆ. ಕೆಲಸ ನಡೆಯುವ 12 ಗಂಟೆಗಳಲ್ಲಿ ಪ್ರತಿ ಗಂಟೆಗೂ 32 ಮಂದಿಗೆ ಯಂತ್ರಗಳಿಂದಪಾಯವಾಗುತ್ತದೆ 10 ನಿಮಿಷಕ್ಕೊಮ್ಮೆ 5 ಕ್ಕಿಂತ ಹೆಚ್ಚು ಕೂಲಿಗಳು ಭಯಂಕರವಾದ ಪೆಟ್ಟುಗಳಿಗೆ ಒಲಿಯುತ್ತಾರೆ.

ಈ ಘೋರ ಶೂದ್ರ (ಕೆಲಸಗಾರರ) ಸಂಹಾರಕ್ಕೆ ಅಜ್ಞಾನವೊಂದೇ ಕಾರಣವಲ್ಲ; ಸ್ವಶಃ ಅನರ ಅಜಾಗ್ರತೆಯೂ ಭಾಗಿಯಾಗಿದೆ ಆದರೆ ಅಜ್ಞಾನದಿಂದಲೇ ಅಜಾಗ್ರತೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಯಂತ್ರಗಳ ಲಾಭವನ್ನು ಅನುಭವಿಸುವವರಿಗೆ ಈ ಕಡೆ ಲಕ್ಷ್ಯವೇ ಇಲ್ಲವಾಗಿತ್ತು. ಮೂರುವರಿಗೆ ದುಡ್ಡಿನ ಲಾಭ; ಯಂತ್ರಗಳಿಂದಾಗುವ ವಸ್ತುಗಳನ್ನು ಕೊಂಡುಕೊಳ್ಳುವವರಿಗೆ ಸುಖದಿಂದ ಮೆರೆದದ್ದೇ ಲಾಭ. ಆದರೆ ಇತ್ತೀಚೆಗೆ ಅನೇಕ ಭೌತಿಕ ಶಾಸ್ತ್ರಜ್ಞರು ಈ ಅಪಾಯಗಳನ್ನು ನಿವಾರಿಸಲಿಕ್ಕೆ ಬಹಳ ಪ್ರಯತ್ನಿಸುತ್ತಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣಗಳು ಕೆಲಸಗಾರರಿಗೂ, ಹೆಂಗಸರಿಗೂ ಬಂದ ಹಕ್ಕುಗಳೇ ಆಗಿವೆ. ಸಾಮ್ರಾಜ್ಯವರು ಕೆಲಸಗಾರರು ಅವರ ಮರಣದ ಪೆಟ್ಟು ಹಡೆದ ತಾಯಂದಿರಿಗೇ ಮದಲ್ಲಿಯೂ ಸದಾ ನಡೆಯುತ್ತಿರುವ ವ್ಯಾಪಾರವೂ ಇದೇ, ಅಂದಮೇಲೆ ಎಲ್ಲ ಧರ್ಮಗಳೂ ಅದರಲ್ಲಿ ಮೂಡಿದ ತಿದ್ದುಪಾಟಯೂವದು? ಒಂದೂ ಇಲ್ಲ. ಆದರೆ ಇಷ್ಟು ಮಾತ್ರ ನಿಜ—ಧರ್ಮ, ದೀನ್, ರಿಲಿಜನ್ ಎಂಬ ಶಬ್ದ ಸಾಮಗಳಿಂದ ಸಾಮಾನ್ಯ ನಿರ್ಮಾಣಕ್ಕೆ ಸೇರಿದ ಸ್ವಾರ್ಥವನ್ನೇ ಸಾಧಿಸಿದ್ದಾರೆಯೇ ಹೊರತು ಸಂಘದ ಹಿತವನ್ನು ಸಾಧಿಸಲಿಲ್ಲ. ಸ್ವಾರ್ಥ ರಾಜ್ಯದಲ್ಲಿ ಧನಕ್ಕೆ ಧರ್ಮದ ಕವಚ, ಧನಕ್ಕೆ ಧರ್ಮದ ಹುರುಪೂ ಬಲವೂ! ದೇವರಿಂದಲ್ಲ.

ಧರ್ಮದ ಹೆಸರೇನೋ ಭಾಷಾಶೈಖರಿಗೆ ಸೇರಿಬಿಟ್ಟಿತು. ಅದರ ಉದ್ದೇಶಕ್ಕೂ, ಸಂಘ ಗುಣಕ್ಕೂ ಅಜಗಜಾಂತರ ಧರ್ಮದ ಉದ್ದೇಶವೇನು? ಮಾನವ ಜೀವಗಳ್ಳವೇ ಧರ್ಮವೆಂಬುದರ ಭಾವವಿರುವುದು? ಅಂದಮೇಲೆ ಅದರ ಕರ್ತವ್ಯವೇನು? ಜೀವನ ಸಂಗ್ರಾಮಕ್ಕೆ ದಯಾರಸವನ್ನು ಸೇರಿಸುವುದೇ ಧರ್ಮದ ಕರ್ತವ್ಯ. ಜಯ ಮಾತ್ರವೇ ಇಲ್ಲ; ಜಯವು ಪಶುಗಳಿಗೂ ಗಮ್ಯವಾಗಿಯೂ, ಸುಖದಾಯಕವಾಗಿಯೂ ಇದೆ. ಆಹಾರ ನಿದ್ರಾಭಯ ಮೈಥುನಗಳಿಂದ ಪ್ರೇರೇಪಿಸಲ್ಪಟ್ಟ ಸಂಗ್ರಾಮದಲ್ಲಿ ಇತರರಿಗೆ ಆಗುವ ಹಿಂಸಾ ನಷ್ಟಗಳಿಗೆ ಪರವೆಯೇ ಆ ಪ್ರಾಣಿಗಳಿಗಿಲ್ಲ. ಅವಕ್ಕೆ ಸುಖಕ್ಕಾಗಿ ಜಯವು ಲಭಿಸಿದರೆ ಸಾಕು. ಮಾನವನೂ ಹಾಗೆಯೇ ಇದ್ದಬೇಕೋ ಈ ಸಂಗ್ರಾಮದಲ್ಲಿ! ಆಥವಾ ವಿಶೇಷವಿರಬೇಕೋ ಅತನಲ್ಲಿ! ಅತನ ಸಂಗ್ರಾಮದಿಂದ ಅತನ ಮತ್ತು ಸಂಘದ ಮಾನವ್ಯದ ಜಯಪತಾಕೆಯು ಹಾರಬೇಕು. ದಯೆಯ ಗೀತೆಯು ಹೊಂಡಬೇಕು. ಸರ್ವ ಸಾಮಾನ್ಯ ವಾಸನೆಗಳ ಪರಾಧೀನತೆಯೂಗಬೇಕು. ವಿವೇಕದ ಜಯಭೇರಿಯು ಮೊಳಗಬೇಕು. ಇಂದ್ರಿಯ ಪ್ರೇರಿತವಿಕಲ್ಪವು ಜ್ಞಾನಸಂಕಲ್ಪಕ್ಕೆ ಆಡಿಯೊಳಾಗಬೇಕು. ಧರ್ಮ, ದೀನ್, ರಿಲಿಜನಗಳಿಂದ ಇದಾಗಿದೆಯೋ? ಆಗುತ್ತಿದೆಯೋ? ಧರ್ಮವೆಂಬ ಶಬ್ದಕ್ಕೆ ಶಕ್ಯ ಆಚರಣಗಳಿಲ್ಲಿವೆ? ಈ ಧರ್ಮದ ತೆರೆಯಲ್ಲಿ ನಡೆಯುವ ದುರಾಚಾರಿಗಳಿಗೂ, ಅಲ್ಲಿ ಹಿಂಸೆಗೆಳಗಾದ ಬಡಪಾಯಿಗಳಿಗೂ ಯಾರು ನೆರವಾಗಬೇಕು? ಎಲ್ಲಕ್ಕೂ ಒಂದೇ ಮಂತ್ರ 'ಉದ್ಧರೇ ದಾತಾನಂ' ತನಗೆ ತಾನೇ ಗತಿ. ದೊಡ್ಡವರು ಹಿಗ್ಗುವುದನ್ನೂ, ಬಡವರು ಬಗ್ಗುವುದನ್ನೂ ನಿಲ್ಲಿಸಬೇಕಾದರೆ ಈ ಮಂತ್ರ ಸಾಧನೆಯೇ ಸರ್ವೋತ್ತಮವಾಗಿರುವ ಉಪಾಯ. ಮಾನವರಿಗೆ ಬಗ್ಗುವವರೇ ನಾಸ್ತಿಕರು. ಇಹವ ಅನುಕೂಲತೆಗಾಗಿ ಸಕಲವನ್ನೂ ಮಾಡುವವರೇ ಧರ್ಮಲಂಡರು. ಯುಕ್ತಿ, ಯಕ್ತ ತತ್ವಗಳಿಗೆ ತಲೆಬಾಗಿಸಿ ಜೀವಿತ ಸಂಗ್ರಾಮದಂಗಡಿಯಲ್ಲಿ ಕಾಲಿಟ್ಟವನೇ ದೇವಮಂದಿರ ನಂಬಿಕೆಯುಳ್ಳವನು. ಪ್ರತಿ ಮಾನವನಿಗೂ ಹಕ್ಕನ್ನು ತಿಳಿದುಕೊಳ್ಳುತಕ್ಕದ್ದು. ಯಾರಿಗೂ ಅದನ್ನು ತಿರಸ್ಕರಿಸಲಿಕ್ಕೆ ಬಿಡಬಾರದು. ಹಿಗ್ಗಿದವನೇ ಬಗ್ಗಿಸುವವನಾದರೆ ಒಗ್ಗಿದವನೇ ಹಿಗ್ಗಿಸುವವನೂ. ಅನೇಕದ ಏತಿಕ ಬಲಕ್ಕೆ ವಿವೇಕಯುತ ತತ್ವದ ನಿರ್ಮಲ ಫಲವನ್ನು ಇದಿರಾಗಿ ನಿಲ್ಲಿಸಿ ಆ ಮೂಲಬಲವನ್ನು ಮಂಗಳಾಸ ಪಥವಾಗಿ ಮಾಡುವುದೇ ಧರ್ಮ. ಈ ಜಾಗ್ರತೆಯು ಮಾಡಲಿಲ್ಲವೆಂದು ಹೇಳಲಿಕ್ಕಾಗುವದಿಲ್ಲ. ಪಶ್ಚಿಮದಲ್ಲಿ ಹೆಂಗಸರು ತಮ್ಮ ಸ್ವಾತಂತ್ರ್ಯವನ್ನು ಇನ್ನೂ ಸಾಧಿಸುತ್ತಲೇ ಹೆಚ್ಚು. ಹಿಗ್ಗಿರೋಣದರಿಂದ ಹೆಚ್ಚಾಗಿ ಇವರಿಬ್ಬರ ಸ್ವಾತಂತ್ರ್ಯದಿಂದ ಈ ಸಂಸಾರಕ್ಕೆ ನಿವಾರಣೋಪಾಯಗಳೂ ನಡೆಯುತ್ತಿವೆ.

ಒಬ್ಬರು ಸುಖಪಡುವಾಗ ಇನ್ನೊಬ್ಬರು ಎಷ್ಟು ಕಷ್ಟ ಪಡುತ್ತಾರೆ ಎಂಬುದನ್ನು ನೋಡುವವರೇ ಧನ್ಯರು. ಅಂಥವರಲ್ಲಿಯೇ ಸಕಲ ಸೌಭಾಗ್ಯಗಳೂ ನೆಲೆಸುವುದು. ಆದರೆ ಒಂದು ಕಡೆ ಮೂಢ ಆಚಾರವು ಬಡಬಗ್ಗರನ್ನು ಪಶುಗಳಿಗಿಂತ ಹೀನಾಯಗತಿಯಲ್ಲಿಟ್ಟಿದೆ. ಇನ್ನೊಂದು ಕಡೆ ದುಡ್ಡಿನ ಮದವು ಅವರನ್ನು ಯಂತ್ರಗಳನ್ನಾಗಿ ಮಾಡಿದೆ ಆಚಾರದ ಹಿಂಸೆ ಇದ್ದಲ್ಲಿ ಕೂಳು, ವಿದ್ಯೆ, ಮಾನ ಇಲ್ಲದೆ ಶೂದ್ರರು ಮೇಲ್ಮೇಲ್ನೆಸೆ ಸಾಯುತ್ತಿದ್ದಾರೆ. ದುಡ್ಡಿನ ಅಧಿಕಾರವಿದ್ದಲ್ಲಿ ಕೂಳು ಧಾರಾಳವಾಗಿ ಅವರಿಗೆ ಬಿದ್ದರೂ ತಕ್ಕ ಮಟ್ಟಿಗೆ ವಿದ್ಯೆ, ಮಾನಗಳು ಇದ್ದರೂ ತೀರಾ ಕೆಳಮಿಲ್ಲದ ಕಂಬಿಗಾರರು ಹೊಳಪಾಗುತ್ತಿದ್ದಾರೆ ಧರ್ಮೋತ್ಕರ್ಷ ರಾಜ್ಯದಲ್ಲಿ ಕ್ಷಾಮ, ಅವಿದ್ಯೆ, ರೋಗಗಳಿಂದ ಒಡವರು ನಾಶವಾಗುತ್ತಾರೆ. ಧನಾಢ್ಯರ ದುರ್ಬಾರಿನಲ್ಲಿ ಯುದ್ಧ ಮತ್ತು ಯಂತ್ರಗಳಿಂದಾಗುವ ಅಪಾಯಗಳಿಂದ ಕೆಲಸಗಾರರು ಕ್ಷಯವಾಗುತ್ತಿದ್ದಾರೆ. ತಾವೇ ನಿರ್ಮಿಸಿಕೊಂಡ ಮಾನಶಾಸ್ತ್ರ ಅನುಕೂಲತೆಗಾಗಿ ಪೂರ್ವಾಚರಿತದಂತೆ ಹಿಂಸೆ. ಅಕಸ್ಮಾತ್ತಾಗಿ ಬಂಧನವನ್ನು ಅವಿಚಾರವಾಗಿ ಬೆಳೆಸುವುದಕ್ಕಾಗಿ ಪಶ್ಚಿಮಾಚಾರದಂತೆ ಹಿಂಸೆ ಯಂತ್ರಗಳ ಬಿತ್ತಾಯದಿಂದ ಏರ್ಪಟ್ಟ ಜೀವನಕ್ಕೆ ಪಶ್ಚಿಮಾಚಾರವೆಂದು ಧಾರಾಳವಾಗಿ ಹೇಳುವುದಕ್ಕೇನಡ್ಡಿ? ಧರ್ಮೋತ್ಕರು ಮೋಕ್ಷದ ಕಡೆ ಕಂಣಿಟ್ಟು ಈ ಹಿಂಸೆಯನ್ನು ಮಾಡುತ್ತಾರೆ! ಧನಾಢ್ಯರು ಲಕ್ಷಗಳ ಕಡೆಗೇ ಲಕ್ಷವನ್ನಿಟ್ಟು ಗೋಳಾಡುತ್ತಾರೆ! ಒಬ್ಬರನ್ನೊಬ್ಬರು ಬಾಯಿಯಿಂದ ನಿಂದಿಸಿದರೂ ಕಾರ್ಯರಂಗದಲ್ಲಿ ಇಬ್ಬರಿಗೂ ಗಂಟುಬಿದ್ದಂತೆಯೇ. ಇಬ್ಬರೂ ಒಂದೇ, ಇಬ್ಬರ ಗಮ್ಯವೂ ಒಂದೇ—ತಮ್ಮ ಸುಖ. ಇಬ್ಬರ ರೀತಿಗಳೂ ಒಂದೇ. ಏಕೆಂದರೆ ಇಬ್ಬರೂ ದೇವರನ್ನು ನುತಿಸಿ ಸ್ತುತಿಸುತ್ತ ತಮ್ಮ ಕೂಳೆಯೂದ ಬಡಬಗ್ಗರಿಗೆ ಪಶ್ಚಾರ್ಜ್ಜ ಮಂತ್ರವನ್ನು ಉಪದೇಸಿಸುತ್ತಾ ಶಾಂತಿಯ ಮಹಿಮೆಯನ್ನು ಹೇಳಿಕೊಡುವವರೇ. ಚರ್ಚ್ (ಕ್ರೈಸ್ತ ದೇವಾಲಯ) ಗಾಗಿ ಅರಸರು ಕಾದಾಡಿದರು. ಅಂಸಂಗಾಗಿ ಚರ್ಚುಗಳು ಜನಸಮುದಾಯವನ್ನು ಪದೇಶಿಸಿ ಶಾಂತಿ ಮೂರ್ತಿಯೇ ಆದ ಕ್ರಿಸ್ತನ ಹೆಸರಿನಲ್ಲಿ ಹುರುದುಂಬಿಸಿ ರಣರಂಗಕ್ಕೆ ಕಳುಹಿಸಿ ಕ್ರೈಸ್ತದ ನದಿಗಳನ್ನೇ ಹರಿಸಿದವು ಬಿಲ್ಲಿಗೆ ದಭೇ್ಯ ಬಲ, ದಭೇ್ಗೆ ಬಿಲ್ಲಿನ ಬಲ. ಎಲ್ಲರೂ ಮಾಡಿದ ಯುದ್ಧಕ್ಕೂ ಧರ್ಮ ಯುದ್ಧವೆಂಬ (ಯಾವ ದೇಶದಲ್ಲಿಯೇ ಆಗಲಿ) ಅಂತೂ ಇಂತೂ ಹಸರೇ. ಬ್ರಾಹ್ಮಣರು, ಕ್ಷತ್ರಿಯರ, ವೈಶ್ಯರು—ಮೂವರು ಕೂಡಿಯೇ ಮನೆಯಲ್ಲಿ ಹೆಂಗಸರನ್ನೂ, ಹೊರಗೆ ಶೂದ್ರರನ್ನೂ ಗೋಳಾಡಿಸಿ ಅವರಿಗೆ ಯಾವ ವಿಧವಾದ ಪದವಿಯೂ, ಧನವೂ, ಹಕ್ಕೂ ಇಲ್ಲದಂತೆ ಮಾಡಿ ಇಂದಿನ ವರೆಗೆ ಸುಖಸಟ್ಟಿರುತ್ತಾರೆ ಮತ್ತೀಗಲಾದರೂ ಆ ಪ್ರಯತ್ನದಲ್ಲಿಯೇ ಇದ್ದಾರೆ. ಸಾರಾಂಶ, ಪ್ರಪಂಚದಲ್ಲೆಲ್ಲಾ ಇಷ್ಟರ ವರೆಗೆ ದುಡ್ಡು, ಬುದ್ಧಿ, ಶಾಸ್ತ್ರ, ಪುರಾಣಗಳು ಮಾಡಿದ್ದು ಇಷ್ಟೇ—ಬಗ್ಗಿದವನಿಗೆ ಗುದ್ದು, ಒದ್ದವನ ಕಾಲಿಗೆ ಮುದ್ದು. ಪ್ರಕೃತಿ ನಿರ್ಮಾಣದಲ್ಲಿ ನಡೆಯುವ ಕೆಲಸಗಾರರು ತಮ್ಮ ಫಲವನ್ನು ಸಾಧಿಸಿ ರಾಜ್ಯ ಕಾರ್ಯಗಳಲ್ಲಿ ಸಹ ಭಾಗಿಗಳಾಗಿದ್ದಾರೆ. ಬ್ರಿಟಿಷ್ ರಾಜ್ಯಾಶ್ವದ ಲಗಾಮು ಸಹ ಇವರ ಕೈಗೆ ಬಂದಿದೆ. ಅವರ ಜಯದಲ್ಲಿ ಎಷ್ಟು ಕೊರತೆಗಳಿದ್ದರೂ ಸ್ವಲ್ಪ ಮಟ್ಟಿಗೆ ಅದು ಧರ್ಮವಿಜಯವೇ ಎಂದು ಹೇಳಬೇಕಾಗಿದೆ. ದಾಸ್ಯದ ಸಂಕಲೆಯನ್ನೂ, ಪೊಬ್ಬನ್ನೂ ಹರಯುವಂಥಾದ್ದೆಲ್ಲವೂ ಧರ್ಮವೇ. ಆದರೂ ಇಷ್ಟು ಸಾಲದು. ಈ ಕೆಲಸವು ನಡೆಯುತ್ತಲಿದ್ದರೂ ಇನ್ನೂ ಎಷ್ಟೋ ನಡೆಯಬೇಕು. ನಮ್ಮಿಂದೇಶದಲ್ಲಿಯೇ ಬಹಳವಾಗಿ ನಡೆಯಬೇಕಾಗಿದೆ.

(ಪ್ರೇಮ ವಿದ್ಯಾಪೀಠ-ಪತ್ರಿಕೋದ್ಯಮ ಶಾಲೆಯಿಂದ)

ಸಮರ್ಪಕ ಆಡಳಿತದಿಂದ, ಕಡಿಮೆಯಾದ ವ್ಯಯದಿಂದ, ಕ್ರಮಕ್ರಮವಾದ ಅಭಿವೃದ್ಧಿಯಿಂದ
ಭಾರತ ವಿಮೋರಂಗದಲ್ಲಿ ಯೋಗ್ಯಸ್ಥಾನವನ್ನೂ, ಉಚ್ಚಗೌರವವನ್ನೂ ಸಂಪಾದಿಸಿರುವ

ಮಂಗಳೂರಿನ

ದಿ ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್.

ಕನ್ನಡಿಗರ ಹೆಮ್ಮೆಯ, ನಿಮ್ಮ ಒಲುಮೆಯ ಈ ಸಂಸ್ಥೆಯಲ್ಲಿ
ತಪ್ಪದೆ ವಿಮೆಯನ್ನಿಳಿಸಿ.

ಮೊದಲಿನ 5 ವರ್ಷಗಳ ಮೌಲ್ಯವೇತನದ ಫಲಿತಾಂಶವಾಗಿ ಪ್ರತಿಯೊಂದು
1000 ರೂಪಾಯಿಗಳ ವಿಮಾಪತ್ರದ ಮೇಲೆ,—

ವರ್ಷ 1ಕ್ಕೆ ರೂಪಾಯಿ 10ರ ಬೋನಸ್ ಕೊಡಲಾಗಿದೆ.

(ಪ್ರಥಮ ಮೌಲ್ಯವೇತನದಲ್ಲಿ ಇಷ್ಟು ಬೋನಸನ್ನು ಹಂಚಿದ ಹಿಂದೀ ವಿಮಾಕಂಪೆನಿಗಳು
ಅತಿ ವಿರಳವೆಂಬುದನ್ನು ಮರೆಯದಿರಿ)

ನಮ್ಮ ಪ್ರಾತಿನಿಧ್ಯವಿಲ್ಲದ ಎಲ್ಲ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ

ಏಜಂಟರು ಬೇಕು.

ಮಾಹಿತಿಪತ್ರ, ವಿವರಣೆಯ ಹಸ್ತಕಾದಿಗಳಿಗೆ:—

ಮಂಗಳೂರಿನ ಕಾರ್ಯಾಲಯಕ್ಕೆ ಬರೆದು ಕೇಳಿ.

ಮಡಿಕೇರಿ ಏಜಂಟರು—
ಬಿ. ಜಿ. ಬೆಳ್ಯಪ್ಪನವರು,
ವಸ್ತ್ರಗಳ ವ್ಯಾಪಾರಿ, ಮಡಿಕೇರಿ. (52—1)

ಸುಂಟಿಕೊಪ್ಪ ಏಜಂಟರು—
ಏ. ಎಸ್. ಮೂಚಯ್ಯನವರು.
ವಸ್ತ್ರಗಳ ವ್ಯಾಪಾರಿ, ಸುಂಟಿಕೊಪ್ಪ.

ಡಾಕ್ಟರ್ ಮೇತ್ಯುಸ್ ಎಬ್ರಹಾಮ್.

ದಂತ ವೈದ್ಯರು.

ಗೀತಾಂಜಲಿ ಬಂಗ್ಲೆ.

(ಪೋಸ್ಟಾಫೀಸು ಎದುರುಗಡೆ.)

ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವರಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಒಪ್ಪುವಂತೆ ಕಟ್ಟುವರು. ಒಮ್ಮೆ ಪರೀಕ್ಷಿಸಿದಲ್ಲು ತಿಳಿಯುವುದು. [52—20]

---

೪೦ ವರ್ಷಗಳಿಂದ ಅನುಭವದಲ್ಲಿ ಬಂದು ಪ್ರಖ್ಯಾತಿ ಹೊಂದಿದ

ಕರ್ಕ ಕಂಪೆನಿ

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥೆ ಜ್ವರ, ದಿನಬಿಟ್ಟು ಬರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ವಿ. ಪಿ. ಪೋಸ್ಟೇಜ್ ಜರೂರು ತರಿಸಿಕೊಳ್ಳಿ.

ಗಣೇಶ ರಾಮಂಚಂದ್ರ ಕರ್ಕೆ,
ಮತ್ತು ಕಂಪನಿ,
ಗಿರಗಾಂವ, ಮುಂಬಯಿ.

(25—22)

SHIROMANI NARAYANACHARYA

Choukhamba Benares City.

THIS MAN
OUR CUSTOMER

ಶಾಸ್ತ್ರಿಗಳೇ, ಪೂರ್ವಿಕರು ಆರೋಗ್ಯರೇ ಅಥವ ಈಗಿನವರೇ? ರಾಮಾಜ್ಞಯ್ಯನವರೇ, ಪೂರ್ವಿಕರ ಆರೋಗ್ಯವೇ ನಿಜವಾದ ಆರೋಗ್ಯ. ಅದಕ್ಕೆ ಕಾರಣವೇನು? ಅವರು ರುದ್ರಾಕ್ಷಿಯನ್ನು ಬಿಡದೆ ಯಾವಾಗಲೂ ಧಾರಣೆಮಾಡುತ್ತ ಇದ್ದರು. ಅದರಿಂದ ಏನು ಫಲ? ಅದನ್ನು ಧರಿಸಿದರೆ ಜೀರ್ಣಶಕ್ತಿ, ಬುದ್ಧಿಶಕ್ತಿ, ವಿದ್ಯಾಭೃದ್ಧಿ, ವಿದ್ಯಾವೃದ್ಧಿಸಂಪತ್ತು, ಕೀರ್ತಿ ಇವುಗಳೆಲ್ಲಾ ಆಗುವುದಾಗಾದರೆ ನಮಗೆ ಅಂತಹ ರುದ್ರಾಕ್ಷಿ ಎಲ್ಲಿ ದೊರೆಯುವುದು? ಅದು ಲೋಕಪ್ರಸಿದ್ಧಿ ಹೊಂದಿದ ನಮ್ಮ ಕಾಶೀ ಚೌಖಂಬಾ ಶಿರೋಮಣೀ ನಾರಾಯಣಾಚಾರ್ಯರಲ್ಲಿಯೇ ಯೋಗ್ಯವಾದ ಕ್ರಯಕ್ಕೆ ಉತ್ತಮ ತರದ ರುದ್ರಾಕ್ಷೀ ದೊರೆಯುವುದು.

ಸಣ್ಣ ಆಡ್ಡೆ ಪ್ರಮಾಣದ ಈಶಿಸರ 1ಕ್ಕೆ ಆಣೆ 1 ರಿಂದ ರೂ. 25ರ ವರೆಗೆ. 108 ರುದ್ರಾಕ್ಷಿಗಳುಳ್ಳ ಸರ 1ಕ್ಕೆ ಆಣೆ 3ರಿಂದ ರೂ. 25ರ ವರೆಗೆ. ಗೌರೀಶಂಕರ ರುದ್ರಾಕ್ಷಿ 1ಕ್ಕೆ ರೂ. 3ರಿಂದ ರೂ. 50ರ ವರೆಗೆ. ಮತ್ತು 3—4—5—6—7—8 ಮುಖಗಳ ಕಾಳು 1ಕ್ಕೆ ಆಣೆ 4 ರಿಂದ ರೂ. 10. ಮತ್ತು 9—10—11 ಮುಖಗಳುಳ್ಳ ಕಾಳು 1ಕ್ಕೆ ರೂ. 1ರಿಂದ 30ರ ವರೆಗೆ. 12—13—14 ಮುಖದ ಕಾಳು 1ಕ್ಕೆ ರೂ. 40ರಿಂದ 100ರ ವರೆಗೆ. ಸಣ್ಣ ರುದ್ರಾಕ್ಷೀ ಅವರೆ ಕಾಳಿಗಿಂತ ಸಣ್ಣದಾಗುತ್ತ ಕ್ರಯ ಜಾಸ್ತಿ. ದೊಡ್ಡ ರುದ್ರಾಕ್ಷೀ ಅಡಕೆಗಿಂತ ದೊಡ್ಡದಾಗುತ್ತ ಕ್ರಯ ಜಾಸ್ತಿ ಆಗುವುದು. (ನಮ್ಮಕ್ಕೆ ಕೆಟಲಾಗಿಗೆ ಬರೆದರೆ ಇನಾಮಾಗಿ ಕಳುಹಿಸುತ್ತೇವೆ. 1 ಆಣೆ ಸ್ಟಾಂಪು ಕಳುಹಿಸಿದರೆ 3 ಇನಾಮುಗಳು—1 ವಿಶ್ವೇಶ್ವರ ಪಟ, 1 ಕಾಶೀ ನಕ್ಷೆ, 1 ಕಾಶಿ ಪಿತ್ರಂಬರ ಕೆಟಲಾಗಿನೊಡನೆ 3 ಇನಾಮುಗಳು.)

ಶಿರೋಮಣಿ ನಾರಾಯಣಾಚಾರ್ಯ,
ಚೌಖಂಬಾ ಬೆನಾರಿಸ್, (ಕಾಶೀ)

52—27

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ದವಸ ಭಂಡಾರದ ಸಾಧನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮವ್ಯವಸ್ಥಿತಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಗಳನ್ನು ಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರೀದಿ ಫಾರಮುಗಳೂ, ಜಪ್ತಿ ಮುಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರೀದಿ ಫಾರಮುಗಳೂ, ಸೆಕ್ಯೂರಿಟಿ ಕೇಸರ್ ಖರೀದಿ ಫಾರಮುಗಳೂ ಓವರ್ ಪುಸ್ತಕಗಳೂ, ಕಾಶಿತ ಪುಸ್ತಕಗಳೂ, ಜಮಾ ಖರ್ಚಿನ ರಿಜಿಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಛೇರಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು

ಮೇನೇಜರ್
ಕೊಡಗು, ಲಿಮಿಟೆಡ್,
ಪಾಡಿಕೇರಿ.

ಗುಂಡು ಹೊಡೆಯುವ ಕ್ರಮಗಳು.

ಉಪಯುಕ್ತ ಸೂಚನೆಗಳು.

ಶಿಕಾರಿಗಳಿಗೆ:—

ನಮ್ಮ ಕೋವಿ ಮತ್ತು ತೋಟಾಗಳು ಶಿಕ್ಷಕ (Our arms and ammunition GUIDE 3) ಇದರಲ್ಲಿ ಗುಂಡು ಹೊಡೆಯುವ ನೂತನ ವಿಧಾನಗಳ ವಿಷಯ ಅತಿ ಉಪಯುಕ್ತ ಸೂಚನೆಗಳಿವೆ.



Goolamhusain Allibhoy & Sons. Ltd.,

26—22 210, Abdulrehman Street, BOMBAY 3.

ಸನ್ 1882ನೇ ಇಸವಿ ಇಂಡಿಯನ್ ಟ್ರಸ್ಟ್ ಆಕ್ಟಿಗೆ ಒಳಪಟ್ಟು ಸರಕಾರದ ಭರವಸೆಯುಳ್ಳ

ದಿ ಬೋಂಬೆ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಅಧ್ಯಕ್ಷರು—ಮಾನನೀಯ ಸರ್ ಲಲ್ಲಿಭಾಯಿ ಸಾಮಲದಾಸ್,
ಕೆ. ಟಿ. ಸಿ. ಐ. ಇ., ಜೆ. ಪಿ. ಯವರು.

ಕೊಚ್ಚಿಕಾರ್ ಬ್ರದರ್ಸ್ ಮದ್ರಾಸು ಬ್ರಾಂಚ್ ಸೆಕ್ರೆಟರಿಗಳು.

ಕಳೆದ ಲಾಭ ಹಂಚುವಿಕೆಯಲ್ಲು ರೂ. 18ರಿಂದ 23ರ ವರೆಗೆ ಬೋನಸು ಡಿಕ್ಲೇರಾಗಿರುತ್ತೆ.

ಹಿಂದಿಯರಿಂದ ಸ್ಥಾಪಿಸಲ್ಪಟ್ಟು ಹಿಂದೂದೇಶದವರಿಗಾಗಿ ಜೀವವಿಮೆಗೆ ಸಮ್ಮಂದಪಟ್ಟಿರುವ ಅತ್ಯುತ್ತಮ ತರದ ಲಕ್ಷಣಗಳಿಂದ ಕೂಡಿ ಕಮ್ಮಿ ಪ್ರೀಮಿಯಮ್ ದರದಲ್ಲಿ ಪಾಲಿಸಿ ಕೊಡುವ ಕಂಪೆನಿ ಇದೆಂದು ಮನ್ನಣೆ ಪಾತ್ರವಾಗಿ ನಂಬಿರಿ.
ಪತಿವ್ರತ್ಮಿಯರು ಮತ್ತು ವ್ಯಾಪಾರಸ್ಥರು ವಗೈರೆಯರಿಗೆ ವಿಶೇಷವಾಗಿ (ಜಾಯಿಂಟ್ ಲೈಫ್) ಪಾಲಿಸಿ ಕಮ್ಮಿ ಪ್ರೀಮಿಯಮ್ ದರದಲ್ಲು ಕೊಡುವ ಈ ಕಂಪೆನಿಯು ಹೆಸರುಗೊಂಡಿದೆ.
ಪಾಲಿಸಿದಾರರು ಅಕಾಸಾತ್ತಾಗಿ ಅಂಗಹೀನರಾದರೆ ಅಂಥವರಿಗೆ ಪಾಲಿಸಿಯು ವೊಇಲಗನ್ನು ಮುಂಚಿತ ಪ್ರೀಮಿಯಮ್ ವಸೂಲಾತಿ ಇಲ್ಲದೆ ಪೆನ್ಶನ್ ರೀತಿಯಲ್ಲು ಉದಾರತ್ವದಿಂದ ಕೊಡಲು ಈ ಕಂಪೆನಿಯು ಎಮುರು ನಿಂತಿದೆ ಎಂದು ನೆನಪಿರಲಿ.
ಮುತುವರ್ಜಿಯಿಂದ ಕೆಲಸ ಮಾಡಲು ಇಚ್ಛಿಸುವ ಗಂಡಸರು ಮತ್ತು ಹೆಂಗಸರಿಗೆ ಉತ್ತಮ ತರಹದ ಕಮಿಶನ್ ವಗೈರೆಯಿಂದ ಏಜೆನ್ಸಿ ಕೊಡಲಾಗುತ್ತೆ.

ಹೆಚ್ಚಿನ ಮಾಹಿತಿಗೆ—**ಬಿ. ಎಸ್. ಐಯ್ಯಪ್ಪು,**
ಕೊಡಗು ಚೀಫ್ ಏಜೆಂಟ್,
ಮಹದೇವಪೇಟೆ, ಮಡಿಕೇರಿ

26—13

ಎರಡು ಕೆಲಸಕ್ಕೊಂದೇ ಸಾಬೂನು

"ಮೈಸೂರು ಗಂಧದ ಸಾಬೂನು."

ಈ ಸಾಬೂನು ನಾಜೂಕಾದ ಚರ್ಮವನ್ನು ಶುಭ್ರಗೊಳಿಸುವುದು ಮಾತ್ರವಲ್ಲ; ಸಂರಕ್ಷಣೆಯನ್ನೂ ಮಾಡುತ್ತದೆ. ಯಾರು ಯಾರು ತಮ್ಮ ಆರೋಗ್ಯದ ಕಡೆ ಗಮನವಿಡುವರೋ ಯಾರು ಯಾರು ತಮ್ಮ

ಚರ್ಮವನ್ನು ಎಚ್ಚರಿಕೆಯಿಂದ ನೋಡುವರೋ ಅವರೆಲ್ಲರೂ ಉಪಯೋಗಿಸುವುದು

ಮೈಸೂರು ಗಂಧದ ಸಾಬೂನು.

ಎಲ್ಲಾ ಅಂಗಡಿಗಳಲ್ಲಿ ಸಿಕ್ಕುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬಿಂಗಳೂರು.

52—53

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	37,181— 0—0
ಜಮೂಬಂದ ಠೇವಣಾತಿ	—	25,9035—8—10
ವಸೂಲಾದ ಕ್ಷೇಮನಿಧಿ	—	1,03851— 4—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳೇನೇ ಹೆಚ್ಚಾಗಿ ಸಾಲಕೊಡಬಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿಯೂ ಒಂದು ವರ್ಷದ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ದರದಲ್ಲಿಯೂ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು, ಪಂದ್ಯಂಡ ಐ. ಬೆಳ್ಯಪ್ಪನವರು.

ಮ್ಯಾನೇಜರ್ ರಾ. ಸಾ. ಪಾಂಡಂಡ ಚಂಗಪ್ಪನವರು,

ಸೆಕ್ರೆಟರಿ ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—2—1936.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರದ್ದಾಗಿರುತ್ತಿದ್ದಿಲ್ಲ. ಈ ಸಂಜೀವಿನಿಯಂತಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಉದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿರುವರು ಮಗುವು ಹೆಚ್ಚು ಕೃಶವಾಗಿ, ಸುರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ಕವಾಗಿ, ಆಗಿಂದಾಗ್ಯೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಮೃತವು ಒಂದು ಟಾನಿಕ್. ಎಲ್ಲೆಡೆಗಳಲ್ಲೂ ದೊರೆಯುವುದು.

ಪ್ರೊಪ್ರೈಯಟರ್ಸ್—

ಕೆ. ಟಿ. ಡೋಂಗರೆ ಕಂಪೆನಿ,

(52—1)ಟಿ ಗಿರಿಗಾಂವ್, ಬೊಂಬಾಯಿ.

EMPIRE OF INDIA LIFE ASSURANCE CO., LTD.

ESTD. 1897.

TEN YEARS' PROGRESS.

	1925 Rs.	1935 Rs.
Income	45,50,127	73,28,467
New Assurances	78,07,000	1,47,57,880
Total Assets	2,46,08,120	4,50,03,372
Assurances in force	6,95,93,793	11,56,12,828

Form of proposal and other particulars will be sent on Application.

Head office:— Empire of India Life Building, BOMBAY.

52—15

Branch Office:— 152/3—Commercial Street, BANGALORE.

ಪಂಡಿತ ಜವಾಹೀರಲಾಲ್ ನೆಹರೂ ಬಂದಾಗ್ಗೆ ಹುಬ್ಬಳ್ಳಿ ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ,

ಒಂದೇ ಸಮನಾಗಿ ಮೂವತ್ತೈದು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು ಜನರಿಂದ ಪ್ರಶಂಸಿಸಲ್ಪಟ್ಟ ಆಯುರ್ವೇದೋಕ್ತ ತಾಜಾ ಮತ್ತು ಪಾಶ್ಚಿಕ ವನಸ್ಪತಿಗಳಿಂದ ತಯಾರಿಸಿರುವ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಮೆಡಲುಗಳನ್ನು ಪಡೆದು ಪ್ರದೇಶದಲ್ಲಿ ಧಾರಾಳವಾಗಿ ಬಜಾರಿಗಿವೆ

ಶಕ್ತಿವರ್ಧಕ ಉತ್ತಮ ತರಗತಿಯ ಟಾನಿಕ್

ಧಾತ್ರಿಘೃತ

ಈ ವನಸ್ಪತಿ ರಸಾರ್ಕಗಳಿಂದ ಶಾಸ್ತ್ರೋಕ್ತವಾಗಿ ಸ್ವದೇಶೀ ಯಂತ್ರೋಪಕರಣಾದಿಂದ ತಯಾರಿಸಿದ ಮಧು ರಾನ್ವಿತ ಇದರ ಸೇವನೆಯಿಂದ ಉಷ್ಣ (ಗರಮಿ), ಧಾತುಸ್ರಾವ, ಸ್ವಪ್ನಾವಸ್ಥೆ, ಕೈಕಾಲು, ಕಣ್ಣಿಳಿಗೆ ಉರಿ, ಮಲಬದ್ಧತೆ ಮುಂತಾದವು ಗುಣವಾಗುವದಲ್ಲದೆ ಜೀರ್ಣಶಕ್ತಿಯು ಹೆಚ್ಚಿ ದೇಹದಾರ್ಢ್ಯವುಂಟಾಗುವುದು. ಇದರಿಂದ ಸಪುಂಸಕತ್ವವಿದ್ದಲ್ಲಿ ಅದು ಹೋಗಿ ವೀರ್ಯ ವೃದ್ಧಿಯಾಗುವದು. ಹೆಂಗಸರಿಗೂ ಗಂಡಸರಿಗೂ ಇದು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ (ಗರಮಿ) ದೋಷಗಳಿದ್ದರೆ ಅವೆಲ್ಲವೂ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ 3 ಬಾಟ್ಲಿಗಳ ಸೇವನೆಯಿಂದ ಪೂರ್ಣ ಗುಣ ಆಗುತ್ತದೆ. 1 ಬಾಟ್ಲಿಯನ್ನು ಸೇವಿಸುವದರಲ್ಲೇ ಇದರ ಗುಣ ಕಂಡು ಬರುವದು ಸ್ವನೂಣ:—ಬೆಳಗಿನಲ್ಲಿ ಒಂದು ತೊಲೆ ಮತ್ತು ಸಂಜೆಗೆ ಒಂದು ತೊಲೆ ತಕ್ಕೊಳ್ಳಬೇಕು.

ಬೆಲೆ—1 ಬಾಟ್ಲಿಗೆ ರೂ. 1—4 0, 3 ಬಾಟ್ಲಿಗೆ ರೂ. 3—8—0, 1 ಡಜನ್ ಬಾಟ್ಲಿಗಳಿಗೆ ರೂ. 12—0—0;

ಮ್ಯಾನೇಜರ್:—ದ್ರಾಕ್ಷಾವೃತ ಡಿಪೊ ಪೋಸ್ಟ್ ನಿಪ್ಪಾಣಿ ಜಿಲ್ಲಾ (ಬೆಳಗಾವಿ.)

52—26 ಕೊಡಗಿನ ಏಜಂಟರು—ನಾವೆಲ್ಲಿ ಸ್ಟೋರ್ಸ್, ಮಡಿಕೇರಿ

ಬಿ ಪುಟ್ಟಯ್ಯ ಶೆಟ್ಟಿ & ಸನ್ಸ್, ಸೋಮವಾರಪೇಟೆ

ಭಕ್ತಾ ಬ್ರದರ್ಸ್, ಶಾಕರಗೋಡು] ಎ. ಎನ್. ಹುಚ್ಚಯ್ಯ, ಪರ್ಚೆಂಟ್, ಗೋಣಿಕೊಪ್ಪಲು.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ಫಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ಪಾಲಿಸಿಗಳ ಪ್ರೀಮಿಯಂ	....	....	ರೂ. 7,62,42,761
ವಾರ್ಷಿಕ ಉಳ್ಪತ್ತಿ	....	....	ರೂ. 3,14,01,970
ಚಾಲ್ತಿಯಲ್ಲಿರುವ ಒಟ್ಟು ಪಾಲಿಸಿಗಳು		....	ರೂ. 54,20,38,518
ಕ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ		....	ರೂ. 16,29,88,814
ಫಂಡ್ಸ್ ಹೆಚ್ಚಿದ್ದು	....	....	ರೂ. 15,53,88,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಮತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ಎನೂ ಕಂಪೆನಿಯಲ್ಲಿ ಏಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನ್
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನ	ಸಿಂಗಪುರ
ಅಲ್ಲಾಹಾಬಾದು	ಢಾಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಿಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟ
ಕೊಯಂಬುತ್ತೂರು	ಗುಂಟೂರು	ಜಲ್‌ಪೇಗುರಿ	ಜಬ್ಬಲ್‌ಪುರ	ಮಧುರೆ & ಮೈಸೂರು

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, 52—8

ಯಂ. ವಿ. ಮುತ್ತುಕೃಷ್ಣ ನಾಯುಡು, (ಬ್ರಾಂಚ್ ಸೆಕ್ರೆಟರಿ.)

Printed & published by P. J. Poliappa at "Kodagu" Press, Mercara for "Kodagu" Ltd.